"Service of the Poor is the Service of God".

ಓಂ

BADAVARA BANDHU

ಬಡವರಬಂಧು

EDITOR:—MANGALORE JARAPPA. ASSOCIATE EDITOR:—B. NARSAPPA.

A HIGH CLASS RUPEE-MAGAZINE TO SUIT ALL INTERESTS.

ವಾರ್ಷಿಕ ಚಂದಾ ಒಂದು ರೂಪಾಯಿ ಮಾತ್ರ!!! ಅಂಚೆವೆಚ್ಚ ನಾಲ್ಕಾಣೆ.

ಭಿನ್ನರುಚಿಗೊಪ್ಪುವ ಕನ್ನಡ ಮಾಸಪತ್ರಿಕೆ. [ಬಿಡಿ ಸಂಚಿಕೆ ಆಣೆ ೦—೧—೬.

"ಬಡವರ ಬಂಧು"ವಿನಲ್ಲಿ ಉಚ್ಚ ತರಗತಿಯ ಸಣ್ಣ ಕಥೆಗಳೂ, ಪದ್ಯಗಳೂ, ಧಾರ್ಮಿಕ ನೈತಿಕ ವಿಚಾರಗಳನ್ನೊಳಗೊಂಡ ಲೇಖಗಳೂ ಬರುವುವು. ಪತ್ರವ್ಯವಹಾರ, ಹಾಸ್ಯ, ವಿಮರ್ಶೆ, ಒಗಟು, "ಟಿಟ್‌ಬಿಟ್ಸ್," ಒಳದೇಶವಿದೇಶ ವಾರ್ತೆಗಳೂ ಕೊಡಲ್ಪಡುವುವು.

ಇಂತಹ ಅಮೂಲ್ಯ ಮತ್ತು ಅತೀ ಅಗ್ಗವಾದ ಮಾಸಿಕಪತ್ರಿಕೆಯನ್ನು

"ಬಡವರಬಂಧು" ಕಾರ್ಯಾಲಯ, ಹಂಪನಕಟ್ಟೆ, ಮಂಗಳೂರು, ಇಲ್ಲಿಂದ ತರಿಸಿಕೊಳ್ಳಿರಿ.

ಸಂಪುಟ ೧	ತಾರೀಕು ೧ನೇ ಎಪ್ರಿಲ್ ೧೯೩೩.	ಸಂಚಿಕೆ ೧೨

ಬಡತನದ ಬಲುಮೆ.

೧

ಮಗುವಿನ ಕೂಳಿಗೆ ಮೈಯನು ಮಾರುವ
ತಾಯಿಯ ಕಂಬನಿಗಳು ಮುಟ್ಟಿ
ಕಾಳೊಂದಿಲ್ಲದೆ ಹಸಿವಿಂದಳಿಯುವ
ಮಕ್ಕಳ ನಿಟ್ಟುಸಿರವು ತಟ್ಟಿ
ಸಿರಿವಂತರು ಹೊಟ್ಟೆಯ ಹೊರೆಯುವರು
ಬಡವರ ಕೈಯಿಂ ಕಸುಗೊಳ್ಳುವರು!

೨

ಸಿರಿವಂತರ ತೇಗೊಂದರೊಳಡಗಿದೆ
ಅಳಿವ ಸಹಸ್ರಗಳಾರ್ತದನಿ!
ಅವಿತಿದೆ ಧನಿಕರ ಹೆಚ್ಚಿನ ಗುಟುಕೊಂ-
ದರಲಿ ಕೋಟಿಗಳ ಕಣ್ಣ ಪನಿ!
ಬಡವರ ಬಾಳಿನ ರಸವನು ಹೀರಿ
ನಲಿವಳು ಧನಿಕರ ಆಶೆಯ ಮಾರಿ!

೩

ಒಳಗೊಳಗೇ ಸುಡುತಿಹ, ದೀನರ
ಅತೃಪ್ತಿಯಿಂ ಧನಗಳನುಂಡ
ದಾರಿದ್ರ್ಯದ ಶಿಖಿ ಜ್ವಾಲೆಗಳಲಿ ತಾ-
ನೇಳ್ವುದು. ಉರಿವುದು ಬ್ರಹ್ಮಾಂಡ!
ಸುರಸುಖದಲಿ ಓಲಾಡುವರಿಂದು
ನರಕಕೂಪದಲಿ ಹೊರಳುವರಂದು!

೪

ಹಸಿವಿಗೆ ನರಳುವ, ನೋವಿಗೆ ಸಾಯುವ
ಬಡವರ ಬಗ್ಗರನಾದರಿಸಿ,
ಅಮೃತಾನ್ನವನ್ನುಣ್ಣಿಸಿ ಸಂಜೀವನ-
ದೌಷಧದಿಂ ನೋವನು ಅಳಿಸಿ
ದರಿದ್ರ ನಾರಾಯಣನೈತಹನು,
ಸಿರಿವಂತರ ಭೈರವನೈತಹನು!

೫

ಕೋಟಿಗಳುದರದ ಹಸಿವಿನ ಬೆಂಕಿ
ದಹಿಸದೆ ಧನಿಕರ ನಾಕಗಳ?
ಅಳಿವ ಸಹಸ್ರಗಳರಚುವ ಗೊಂದಲ
ತಲ್ಲಣಿಸದೆ ಮೂಲೋಕಗಳ?
ಬಡವರ ಹೃದಯದ ನೆತ್ತರ ಚಿಲುಮೆ
ಬತ್ತಿ ತೋರುವುದು ಬಡವರ ಬಲುಮೆ!

—ಜಿ. ವಾಸುದೇವರಾವ್.

"ಬಡವರ ಸೇವೆಯೇ ಭಗವಂತನ ಸೇವೆ."

ಬಡತನದ ಬಾಳಿನಲ್ಲಿ.

ಕವಿ:— ತುಂಟರ ತಂಡದ "ವಿಠ್ಠಲಸುತ" ಬೆಳಗಾವಿ.

೧

ಮನೆಯೆಲ್ಲ ಇಲಿ-ಹೆಗ್ಗಣಗಳ ಹಾವಳಿಯಿಂದ ।
ಅನುದಿನವು ಪೊಳ್ಳಾಗಿ ಹೋರ್ಗಳಿಂ ಕೂಡಿಹುದು ।
ಮನವಾರೆ ಹಾವು-ಚೇಳುಗಳಾಡುತಿಹವಲ್ಲಿ ಬಡತನದ ಬಾಳಿನಲ್ಲಿ ॥

೨

ಪುಡಿಯಾಗಿ ಮಂಗಗಳ ಕಾಟದಿಂ ಹಂಚುಗಳು ।
ತಡೆಗೆಟ್ಟು ಮಳೆಗಾಲದೊಳ್ ಸೋರಿ ನೆಲವೆಲ್ಲ ।
ಅಡಿಯಿಡಲುಬಾರದೊಲು ತೇವಿಸಿಂ ಕೂಡಿಹುದು ಬಡತನದಬಾಳಿನಲ್ಲಿ ॥

೩

ತೇವಿನಿಂ ಚಳಿಯು ಮೈಯೊಳ ಸೇರಿ ಮನೆ ಜನರು ।
ಆವಗಂ ರೋಗಂಗಳಾವರಿಸೆ ಬಳಲುವರು ।
ಭಾವಿಸಲವಗೌಷಧಿಯುನೀವ ಗತಿಯಿಲ್ಲ ಬಡತನದ ಬಾಳಿನಲ್ಲಿ ॥

೪

ಒಡಲು ತುಂಬನ್ನ ದೊರಕದಲೆ ಒಂದತ್ತುಗಳು ।
ಬಿಡದಲಡಿಗಡಿಗೆಯೊದಗುತಲಿಹವು ದೇಹಕ್ಕೆ ।
ತೊಡ-ಉಡಲು ಬಟ್ಟೆಗಳು ಪೂರೈಸವೆಂದಿಗುಂ ಬಡತನದ ಬಾಳಿನಲ್ಲಿ ॥

೫

ಮುದ್ದುಗುವರರು ಹರಕು-ಹೊಲಸು ಬಟ್ಟೆಗಳನ್ನು ।
ಹೊದ್ದು ಚಳಿ—ಮಳೆ—ಬಿಸಿಲುಗಳನು ತಡೆಯುತಲಿಹರು ।
ನಿದ್ದೆ ನೀರಡಿಕೆಗಳ್ ನಿಲ್ಲವೀ ಬಗೆಯು ನೋಡಿ ಬಡತನದ ಬಾಳಿನಲ್ಲಿ ॥

೬

ಒಬ್ಬ ಹಸುಳನು ಹಸಿವು! ಹಸಿವು!! ಎಂದೊರಳುವನು ।
ಒಬ್ಬ ಎದೆಯುರಿ ತಡೆಯಲಾರದಲೆ ಚೀರುವನು ।
ಒಬ್ಬನಾದರೆ ತನಗದೇನೇನೊ ಬೇಡುವನು ಬಡತನದ ಬಾಳಿನಲ್ಲಿ ॥

೭

ಅಡಿಗಡಿಗೆ ತಾಪಗಳು ಕೈ ಚಾಚಿ ನಿಂತಿಹವು ।
ಕೊಡರಾರು ಮುಕ್ಕು ಕಾಳನು ಕೂಡ ನಮಗೆಂದು ।
ದುಡಿ ದುಡಿದು ಮೈಯೆಲುಬು ಸವೆದು ಬಡವಾಗಿಹವು ಬಡತನದ ಬಾಳಿನಲ್ಲಿ ॥

೮

ಹಬ್ಬ ಹುಣ್ಣಿಮೆಗಳೆಲ್ಲವು ದೂರ ಸಾಗಿಹವು ।
ಸಿಬ್ಬಣಕೆ ಕರೆಯಲಾರರು ಬಳಗದವರೆಲ್ಲ ।
ಹುಬ್ಬುಗೈ ಹಚ್ಚಿ ನಮ್ಮನು ನೋಡುವನರಿಲ್ಲ ಬಡತನದ ಬಾಳಿನಲ್ಲಿ ॥

೯

ಎಲ್ಲಿ ಹೋದರು ಕರೆದು ಮಾತನಾಡಿಪರಿಲ್ಲ ।
ಎಲ್ಲಿ ಹೋದರು ಒರಟು ನುಡಿಗಳಿಗೆ ತೆರಪಿಲ್ಲ ।
ಎಲ್ಲಿ ಹೋದರು ನಮ್ಮ ನಂಬುಗೆಯು ಪೊದಲಿಲ್ಲ ಬಡತನದ ಬಾಳಿನಲ್ಲಿ ॥

೧೦

ಎಲ್ಲರೆಮ್ಮನು ಕಂಡು ಒತ್ತಾಯ ನಡೆಸುವರು ।
ಒಲ್ಲೆನೆನೆ ಡಂಕಿಟ್ಟು ಪಾಳ್ಗೈವರೆಲ್ಲವನು ।
ಬಲ್ಲಿದರ ಬಾಲ ಬಡೆವವು ನ್ಯಾಯ—ಸೀತಿಗಳ್ ಬಡತನದ ಬಾಳಿನಲ್ಲಿ ॥

೧೧

ನಮ್ಮ ಸುಗುಣಗಳೆಲ್ಲ ಕುಗುಣಂಗಳೆನಿಸುವವು ।
ನಮ್ಮ ಮೌನವು ಹೇಡಿತನವಾಗಿ ಕಾಣುವುದು ।
ನಮ್ಮ ಶೀಲವು ತಾನೆ ಮೂಢತನವೆನಿಸುವುದು ಬಡತನದ ಬಾಳಿನಲ್ಲಿ ॥

೧೨

ಸರಕಾರಿ ಚಾಕರಿಗೆ ಮುರವತ್ತು ಹಣ ಬೇಕು ।
ನೆರೆಹೊರೆಯ ಚಾಕರಿಗೆ ಜಾತಿ ಸರಿಯಿರಬೇಕು ।
ಇರುವ ಬಗೆಯಲ್ಲಿರಲು "ತನ್ನ" ಮಾರಿರಬೇಕು ಬಡತನದ ಬಾಳಿನಲ್ಲಿ ॥

೧೩

ಹಿಂದೆ ದೂರಿಪರಲ್ಲಿ ಕಿವುಡನಾಗಿರಬೇಕು ।
ಮುಂದೆ ದೂರಿಪರಲ್ಲಿ ಮೂಕನಾಗಿರಬೇಕು ।
ಬಂಧಿಸುತೆ ಪೊಡೆವಲ್ಲಿ ಹಸುಳೆಯಂತಿರಬೇಕು ಬಡತನದ ಬಾಳಿನಲ್ಲಿ ॥

೧೪

ಬೇಡಲೆಮ್ಮೆದೆಯುಳುಕಿ ಸಾವ ಬರ ಹೇಳುವುದು ।
ಕಾಡಲೆಮ್ಮಯ ಮನವು ತಳಮಳವ ತಾಳುವುದು ।
ಕೂಡಲೆಮ್ಮಯ ಜನದೆ ಹೆಜ್ಜೆ ಹಿಂದೆಗೆಯುವುದು ಬಡತನದ ಬಾಳಿನಲ್ಲಿ ॥

೧೫

ಜನರು ನಮ್ಮಿಂದೆಲ್ಲ ಬಯಕೆಗಳ ಪಡೆಯುವರು ।
ನೆನೆದು ತಾವುಂಡುಳಿದರೊಳಗಿನಿಸು ಕೊಡರವರು ।
ಶುನಕನೊಲು ತಿರುಗುತನ್ನಾನ್ನವೆಂದೊರಲುವೆವು ಬಡತನದ ಬಾಳಿನಲ್ಲಿ ॥

೧೬

ಎರಡು ಬಗೆಯೇಕೆನಲು 'ಕರ್ಮ'ವೆಂದುಸುರುವರು ।
ಸರಿದಾಡಲೆತ್ನಿಸಲು ಶೀಮೆಯನು ಕಟ್ಟುವರು ।
ವರಮಾಂತ್ರಿಕನ 'ಬಲೆಗೆ ಬಿದ್ದ ಫಣಿ'ಯಂತಿಹೆವು ಬಡತನದ ಬಾಳಿನಲ್ಲಿ ॥

೧೭

ಮರುಗುವವರಿಲ್ಲೆಮ್ಮ ಬಾಳ ಭವಣೆಯ ಕಂಡು ।
ಮರುಗಿದರು ಕೂಡೆ ಕೈಪಿಡಿದೆಬ್ಬಿಸುವರಿಲ್ಲ ।
ದರದರನೆ ಕಟುಕನೆಳೆವಾಕಳಿನ ಗತಿಯೆಮಗೆ ಬಡತನದ ಬಾಳಿನಲ್ಲಿ ॥

೧೮

ಮಡದಿ ಮಕ್ಕಳು ಪಡುವ ಸಂಕಟಂಗಳ ಕಂಡು ।
ನಡುಗುವುದು ಮೈಯೆಲ್ಲ ಮನುವು ಕಳವಳಗೊಂಡು ।
ಮಡಿದು ಬಾಳನು ಕಡಿಯಬೇಕೆಂದು ಬಯಸುವೆವು ಬಡತನದ ಬಾಳಿನಲ್ಲಿ ॥

ಅಂದು — ಇಂದು — ಮುಂದು.

ಅಂದು ‘ಬಡವರ ಬಂಧು’ವು ಜನ್ಮವೆತ್ತಿದಾಗ ಎಷ್ಟೋ ಜನರು ನಿರಾಶಾವಾದದ ಕಾರ್ಮುಗಿಲ ಕಡೆ ಬೆರಳೊಡ್ಡಿ ತೋರಿಸಿ ನಮಗೆ ಎಚ್ಚರವನ್ನು ಕೊಟ್ಟರು. ಆದರೂ ನಾವು ಮುಂದೊತ್ತಿದೆವು. ಫಲವಾಗಿ, ನಮಗೆ ಅನೇಕಾನೇಕ ಮಹನೀಯರುಗಳು ಪ್ರೋತ್ಸಾಹವನ್ನಿತ್ತರು. ಹಲಕೆಲವು ತಿಂಗಳುಗಳಲ್ಲಿ ಮುದ್ರಿತವಾದ ಸಂಚಿಕೆಗಳು ಗ್ರಾಹಕರ ಬೇಡಿಕೆ (Demand) ಗಿಂತ ಕಡಿಮೆಯಾಗುವಂತಾಯಿತು. ಒಂದೆರಡು ತಿಂಗಳುಗಳಲ್ಲಿ ಪ್ರೋತ್ಸಾಹದಾಯಕರ ಆಗ್ರಹವು ಬಲವಾಗಿ, ಹೊರಗಿನವರಿಗೆ ಕಳುಹಿಸಲ್ಪಟ್ಟ ವಿ. ಪಿ.ಯಾದರೂ ಹಿಂದೆ ಬಂದು, ಒಂದು ಪುಸ್ತಕವು ದೊರೆತರೆ ಸಾಕೆನಿಸುತ್ತಿತ್ತು. ಅನೇಕ ಪ್ರಾಂತ್ಯಗಳ ಏಜಂಟರುಗಳ ಬೇಡಿಕೆಗಳೂ ಹೆಚ್ಚಾದುವು. ತನ್ಮಧ್ಯೆ, ಕೆಲವು ಹಿತಚಿಂತಕರು ಸಂಚಿಕೆಗಳಲ್ಲಿ ಬರಬೇಕಾದ ಲೇಖನಗಳ ಔಚಿತ್ಯ, ರುಚಿ, ಭಾಷೆಗಳ ಕಡೆಗೆ ನಮ್ಮ ಲಕ್ಷ್ಯವನ್ನು ಬಡವರ ಶ್ರೇಯಃ ದೃಷ್ಟ್ಯಾ ತಿರುಗಿಸಿದರು. ಕೆಲವು ಮಂದಿ ಜಾಹೀರಾತುದಾತರೂ ನಮ್ಮನ್ನೆತ್ತಿ ಹಿಡಿದರು. “ಬಡವರ ಬಂಧು’ವಿನ ಉದ್ದೇಶವೇನಿರಬಹುದು?” ಎಂದು ಅನೇಕರು ತರ್ಕಿಸಿಕೊಂಡರೂ, ಕ್ರಮೇಣ ನಮ್ಮ ಬರೆಹಗಳ ತುಲನೆಯಿಂದಲೇ ಉದ್ದೇಶವು ಬಯಲಾಯಿತು. ಹಾಗೂ ಒಂದು ಕಡೆಯಿಂದ ಚಂದಾದಾರರ, ಇನ್ನೊಂದು ಕಡೆಯಿಂದ ಮುದ್ರಣ ಯಂತ್ರದವರ, ಮತ್ತೊಂದು ಕಡೆಯಿಂದ ಲೇಖಕರ, ಮಗುದೊಂದು ಕಡೆಯಿಂದ ಜಾಹೀರಾತುದಾತರ ಮಹೌದಾರ್ಯದಿಂದ ನಾವು ವಿಜಯಿಗಳಾಗಿ, ಇಂದು ‘‘ಅಬ್ಬಬ್ಬ! ಒಂದು ವರ್ಷದ ತರಂಗಗಳನ್ನು ಗೆದ್ದೆವು!” ಎಂದೆನ್ನುವಂತಾಯಿತು. ಇಂತಹ ಸುಖಪ್ರಸಂಗಕ್ಕೆ ಕಾರಣೀಭೂತರಾದ ಸಮಸ್ತರಿಗೂ ನಮ್ಮ ಅನಂತ ವಂದನೆಗಳು. ಕವಿವರ್ಯ Longfellow ಇವರು ಎಂದಂತೆ ‘Let the dead past bury its dead’ ಎಂಬ ಸನ್ನುಡಿಯನ್ನು ಸ್ಮರಿಸಿ ಅಡಿಯಿಡುವೆವು.

ಇಂದು ಮುಂದಾಲೋಚನೆಗೆ ತೊಡಗಿದ್ದೇವೆ. ಸಂಪಾದಕ, ಉಪಸಂಪಾದಕರಿಬ್ಬರ ಮತ್ತು ‘ಬಡವರ ಕೂಟ’ದ ಸಾಹಸೋದ್ಯಮಗಳ ವೇದಿಕೆಯ ಮೇಲೆಯೇ ದ್ವಿತೀಯ ವರ್ಷದಲ್ಲೂ ‘ಬಡವರ ಬಂಧು’ ಧ್ವಜವನ್ನು ಸ್ಥಾಪಿಸಬೇಕೋ, ಅಥವಾ ಆ ಆಶಾಪೂರ್ಣ ಪತಾಕೆಯನ್ನು ಸಾರ್ವಜನಿಕರ ಆಶ್ರಯವೇದಿಕೆಯ ಮೇಲೆ ನೆಡಬೇಕೋ ಎಂಬ ಕುರಿತು ವಿಚಾರವಾಗುತ್ತಲಿದೆ. ಸಾರ್ವಜನಿಕರ ಸಹಾನುಭೂತಿಯುಕ್ತವಾದ ಯಾವ ಸಂಸ್ಥೆಯೂ ದೌರ್ಬಲ್ಯವಾಗುವುದಿಲ್ಲವೆಂದು ನಿರ್ವಿವಾದವಿರುವಾಗ, ‘ಬಡವರ ಬಂಧು’ವಿನ ಭಾವೀ ಜೀವಮಾನವನ್ನು ಸದಾಶ್ರಯದಾತರಿಗೇಕೆ ಧಾರೆಯೆರೆದು ಕೊಡಬಾರದು? ಕನ್ನಡಿಗರಲ್ಲಿ ದಾನಿಗಳು ಬಹಳ—ಎಂದಾಗ ಆ Longfellow ಕವಿವರ್ಯರೆಂದಂತೆ ‘Act act in the present’ ಎಂಬ ತತ್ವಧಾರಣೆ ಮಾಡಿ, ಐದು ರೂಪಾಯಿ ಯೋಜನೆಯೊಂದನ್ನು ಹೂಡಿ ಸಾರ್ವಜನಿಕರ ಬೆಂಬಲವನ್ನು ಕೋರುವೆವು. ಸಾಧಿಸುವೆವು—ಸಬಳ ನುಂಗಲು ಸಾಧ್ಯವಾದರೆ ಎಲ್ಲರಿಗೂ ಆನಂದ!

ಮುಂದು ಏನೆಲ್ಲ ನಮ್ಮನ್ನು ಕಾದು ನಿಂತಿವೆಯೆಂದು ಹೇಗೆನ್ನಲಿ? ಆದರೂ ಪುನಃ ಆ Longfellow ಕವಿವರ್ಯರೆಂದಂತೆ ‘Think not the future however pleasant’ ಎಂದು ಭಾವಿಸಿ, ವರ್ತಮಾನ ಕಾಲದಲ್ಲಿ ಸಾಹಸಪೂರ್ವಕ ಕೆಲಸಮಾಡಿ, ಒಂದು **ವಿಶೇಷ ಸಂಚಿಕೆ**ಯನ್ನು ಹೊರಡಿಸುವೆವು. “ಎರಡನೆಯ ವರ್ಷದ ಪ್ರಥಮ ಸಂಚಿಕೆಯು ವಿಶೇಷ ಸಂಚಿಕೆಯಾಗುವುದು; ಮೇ ತಿಂಗಳಲ್ಲಿ ಸಂಚಿಕೆಯಿಲ್ಲ” ಎಂಬುದನ್ನು ಕೇಳಿ ಯಾರಾದರೂ ಮೂಗಿನ ಮೇಲೆ ಬೆರಳಿಡುವುದನಗತ್ಯ—ಕಾರಣ, ವರ್ಷದ ಮಧ್ಯೆ ಗ್ರಾಹಕರಾದವರಿಗೆ ೧೨ ಸಂಚಿಕೆಗಳು ಖಂಡಿತ ತಲಪುವುವು. ಮುಂದಕ್ಕೆ ‘ಬಡವರ ಬಂಧು’ವಿನ ಪುಟಗಳನ್ನು ಹೆಚ್ಚಿಸಬೇಕೋ, ಅದನ್ನು ಸಚಿತ್ರವಾಗಿ ಮಾಡಬೇಕೋ, ಪಾಕ್ಷಿಕ, ಅಥವಾ ವಾರಪತ್ರಿಕೆಯನ್ನಾಗಿ ಹೊರಡಿಸಬೇಕೋ, ಈಗಿರುವ ಚಂದಾ ಮೊಬಲಗನ್ನು ಏರಿಸಬೇಕೋ, ತಗ್ಗಿಸಬೇಕೋ ಏನೆಂಬ ವಿಷಯಗಳು ದ್ವಿತೀಯ ವರ್ಷದಲ್ಲಿನ ಚಂದಾದಾರರ, ಪೋಷಕರ ಆಶ್ರಯದಾತರ ಸಹಾನುವರ್ತನೆಗಳ ಅಳತೆಯ ಮೇಲೆ ಹೊಂದಿಕೊಂಡಿವೆ. ಮಹಾಜನರ ಉದಾರಾಶ್ರಯವು ದೊರೆತರೆ ಎಂತಹ ಅಸಾಧ್ಯ ವಿಷಯವೂ ಸಾಧ್ಯವಾಗುವುದರಲ್ಲಿ ಸಂದೇಹವಿಲ್ಲ. ಆಶ್ರಯವು ಹೊರಬೀಳಬೇಕಾದರೆ ಮೊದಲು ಸಾಹಿತ್ಯದಲ್ಲಿ ಪ್ರೇಮವಿರಬೇಕು. ಆ ಪ್ರೇಮವುಂಟಾಗಬೇಕಾದರೆ ವಾಚನಾಭಿರುಚಿಯಿರಬೇಕು. ವಾಚನಾಭಿರುಚಿಯಿರಬೇಕಾದರೆ ಕರ್ಣಾಟಕಸ್ಥರು ತಮ್ಮ ನಾಡಿನ ಪ್ರತಿಯೊಂದು ರೂಪದ ಸಾಹಿತ್ಯದಲ್ಲಿ ಲಕ್ಷ್ಯವನ್ನು ಹರಿಸಬೇಕು. ತಮ್ಮ ಜನರು, ತಮ್ಮ ಭಾಷೆ, ತಮ್ಮ ಸಾಹಿತ್ಯ ತಮ್ಮ ಕರ್ತವ್ಯವೆಂಬ ಭಾವನೆಗಳ ಅಂತಃಸ್ಫೂರ್ತಿ, ಬಾಹ್ಯಸ್ಫೂರ್ತಿಗಳು ನಮ್ಮವರಲ್ಲುಂಟಾಗಬೇಕು. **ಅಂದಿನ ಇಂದಿನ ಮುಂದಿನ** ಮಾತುಗಳಾದ ಮೇಲೇನು? ಬದ್ಧಾಂಜಲಿಗಳಾಗಿ ಮಣಿದು, ಆ ಕರುಣಾಕರನನ್ನು ನೆನೆದು, ‘**ಭದ್ರಂ, ಶುಭಂ, ಮಂಗಲಂ!**’ ಎಂದು ಹೇಳಿ, ನವಶಕ್ತಿಯಿಂದ, ನವ ಪ್ರಭೆಯಿಂದ, ನವ ಪ್ರತಿಭೆಯಿಂದ ಮತ್ತು ತ್ಯಾಗದಿಂದ ಮುಂದೊತ್ತುವೆವು. ಎಲ್ಲರ ಕೃಪೆಯೊಂದು ಮಾತ್ರ ಸದಾ ಇರಲಿ!

ಓಂ.

ಶಾಂತಿ! ಶಾಂತಿ! ಶಾಂತಿ!

+ + + +

ರಮಾಬಾಯಿ.

– By –

K. A. Thammayya, B. A.,

"None but the bravė deserve the fair"

ಇದೀ ನಗರವನ್ನು ತಲೆಯೆತ್ತಿ ನೋಡುವ ಮಂಗಳೂರು ಪ್ರಾಂತ್ಯದ ಪೂರ್ವದ, ಕದರೆ ಅರಸರ ಅರಮನೆಯ ಕುರುಹನ್ನು ನೋಡಿದ ಮಾತ್ರದಿಂದ ಯಾವನೊಬ್ಬನ ಹೃದಯದಲ್ಲಾದರೂ, ಶೋಕ, ಭಕ್ತಿ, ಸ್ವಾಭಿಮಾನ, ಸ್ವಜನಾಭಿಮಾನ, ಸ್ವದೇಶಾಭಿಮಾನ—ಇವೇ ಮುಂತಾದ ಭಾವನೆಗಳು ಉಕ್ಕಿ ಹರಿಯದಿರಲಾರವು. ಈ ಕುರುಹನ್ನು ಯಾವನಾದರೊಬ್ಬನು ಕ್ಷಣಕಾಲ ನಿರೀಕ್ಷಿಸ ತೊಡಗಿದರೆ, ಅವನು ತಟಸ್ಥನಾಗುವನು—ಹಾಗೂ ಭಾಷ್ಪಲೋಚನನಾಗಿ, ತನ್ನನ್ನು ತಾನೇ ಮರೆತುಕೊಳ್ಳುವನು.

ಕ್ರೈಸ್ತಾಬ್ದದ ಸಾವಿರದ ಮುನ್ನೂರ ಅರುವತ್ತೈದನೆಯ ಸಂವತ್ಸರದಲ್ಲಿ ವಿಜಯನಗರ ಸಾಮ್ರಾಜ್ಯವು ಯವನರಿಂದ ನಾಶ ಮಾಡಲ್ಪಟ್ಟರೂ, ದಕ್ಷಿಣಹಿಂದೂಸ್ಥಾನದ ಹಿಂದೂರಾಜ್ಯಗಳು ನಾಶವಾಗಲಿಲ್ಲವೆಂದು ಹೇಳಬಹುದು. ದಕ್ಷಿಣ ಹಿಂದೂಸ್ಥಾನದಲ್ಲೆಲ್ಲಾ ಬೇರೆ ಬೇರೆ ಮುಖಂಡರು ಬೇರೆ ಬೇರೆ ಪಾಳೆಯಗಳನ್ನು ಸ್ಥಾಪಿಸಿಕೊಂಡು, ನಿರಂಕುಶ ಪ್ರಭುಗಳಾಗಿ ಆಳತೊಡಗಿದರು. ಮಂಗಳೂರು ಪ್ರಾಂತ್ಯದಲ್ಲೇ ಮೂರು ನಾಲ್ಕು ಪಾಳಯಗಳಾದುವು. ಕದ್ರೆ ಅರಸರು ಬಹಳ ಪ್ರಸಿದ್ಧರಾಗಿದ್ದರು.

ಕದ್ರೆ ಅರಸನ ಅರಮನೆಯ ಸುತ್ತಲೂ ದಟ್ಟವಾಗಿ ಬೆಳೆದ ಉದ್ಯಾನ ಅದರ ಸ್ವಲ್ಪ ದೂರದಲ್ಲಿ ತೆಂಗಿನ ತೋಪು; ಅದರಾಚೆ ದಟ್ಟವಾಗಿ ಬೆಳೆದ ಮರ ಗಿಡಗಳು; ಕುರಿಚಲುಗಳು; ಈ ಕಾಡಿನ ಮಧ್ಯೆ ಸ್ವಚ್ಛ ಜಲದ ಅದೊಂದು ಕೆರೆ ಕದ್ರೆ ಅರಸರು ಅದಕ್ಕೆ ಮೆಟ್ಟಲುಗಳನ್ನು ಹಾಕಿಸಿದ್ದರು. ಈ ಸಣ್ಣ ಕಾಡಿನಿಂದ ಕೆಲವು ವೇಳೆ, ಚಿರತೆಗಳು ಹೊರಬಿದ್ದು ಅನೇಕ ದನಕರುಗಳನ್ನೂ, ನಾಯಿಗಳನ್ನೂ ಕೊಂದು ಎತ್ತಿಕೊಂಡು ಹೋಗಿಬಿಡುವುವು. ಕದರೆ ದೇವಸ್ಥಾನದ ದೇವರಿಗೆ ಪೂಜೆಯು ಸಮರ್ಪಕವಾಗಿ ನಡೆಯದಿದ್ದರೆ ಈ ಅಪಶಕುನಗಳಾಗುವುವೆಂದು ಅಲ್ಲಿಯ ಜನರು ನಂಬಿದ್ದರು!

ಕ್ರೈಸ್ತಾಬ್ಧದ ಸಾವಿರದ ಆರುನೂರ ಇಪ್ಪತ್ತೈದನೆಯ ಸಂವತ್ಸರ. ವಸಂತ ಕಾಲ, ಪೌರ್ಣಮಿ ರಾತ್ರಿ, ಸಾಧಾರಣ ಹತ್ತು ಗಂಟೆಯ ಸಮಯ. ಹಗಲೆಲ್ಲಾ ದಿವಾಕರನ ಭೀಷಣ ಕಿರಣಗಳಿಂದ ಕಾದು ಹೋಗಿದ್ದ ನೆಲವು ಈಗ ತಣ್ಣಗಾಗುತ್ತಾ ಬರುತ್ತಿತ್ತು. ವಿರಹಿಗಳ ಹೃದಯವನ್ನರಿಯುವ ಮದನನ ಚಕ್ರವೋ, ಅಥವಾ ರತೀದೇವಿಯ ಕನ್ನಡಿಯೋ, ಅಥವಾ "ಕಾರೊಡಲನುರದೊಳೊಪ್ಪುವ ಕೌಸ್ತುಭವೋ" ಅಥವಾ ಆಕಾಶ ರಮಣಿಯ" ಸಿಂಧೂರ ಬೊಟ್ಟೋ, ಎಂಬಂತೆ ಚಂದ್ರನು ಬೆಳಗುತ್ತಿದ್ದನು. ದೂರದಿಂದ ಕೇಳಿ ಬರುತಿದ್ದ ನರಿಗಳ ಕೂಗುಗಳೂ, ನಾಯಿಗಳ ಬೊಗಳುವ ಶಬ್ಧವೂ, ಪೇಚಕ ಪಕ್ಷಿಯ ಕಠೋರ ಧ್ವನಿಯೂ, ಕ್ರಿಮಿಕೀಟಗಳ "ಕಿರಿಕಿರಿ" ನಾದವೂ ಹೊರತು, ಬೇರೆ ಯಾವ ಶಬ್ಧವೂ ಕೇಳಿ ಬರುತ್ತಿರಲಿಲ್ಲ. ಸಮುದ್ರದಿಂದ ಸುಯ್ಯಲರು "ಸುಯ್ಯೆ"ಂದು ಸೂಸಿ ಮನುಷ್ಯರ ಹೃದಯವನ್ನು ಉಲ್ಲಾಸಗೊಳಿಸುತ್ತಿದ್ದಿತು. ಈ ನಿಶಾ ಸೌಂದರ್ಯವು ಯಾವನೊಬ್ಬನ ಹೃದಯ ವನ್ನಾದರೂ ಸೆಳೆದು, ಹೃದಯವನ್ನುಬ್ಬಿಸಿ ಬಿಡದಿರುತಿದ್ದಿಲ್ಲ. ಅಂತಹ ರಮ್ಯತೆ!

ರಾಜಪುತ್ರಿ ರಮಾಬಾಯಿಯೂ, ಈ ಸೃಷ್ಟಿ ಸೌಂದರ್ಯದಿಂದ ಆಕರ್ಷಿಸಲ್ಪಟ್ಟಳು. ಅವಳು ತನ್ನ ಮುದಿ ಸೇವಕನಾದ ಶೀನ ಶೆಟ್ಟಿಯನ್ನು ಕರೆದು,—"ಆ ಕೆರೆಯ ವರೆಗೆ ಹೋಗಿ ಬರುವ" ಎಂದಳು. ಅದಕ್ಕೆ ಶೀನ ಶೆಟ್ಟಿಯು—"ಅಯ್ಯಮ್ಮಾ, ಅಲ್ಲೀಗೆ ಹೋದ್ರೆ ಅಪಾಯ್ಗಾಯ ಒದ್ಗೀತು" ಎಂದನು. "ನೀನು ಈಗೀಗ ಹೇಡಿಯಾಗುತ್ತಾ ಬರುತ್ತೀ. ನಡೆ ಹೋಗೋಣ! ಏನಾದರೂ ಅಪಾಯ ಬಂದರೆ, ನಾನು ನಿನ್ನನ್ನು ಕಾಪಾಡುತ್ತೇನೆ!" ಚಿಕ್ಕಂದಿನಿಂದ ಶೆಟ್ಟಿಯು ರಮೆಯನ್ನು ಎತ್ತಿ ಆಡಿಸಿದ್ದನು. ಆ ಕಾರಣ ಅವನು ಅವಳೊಡನೆ ಸಲಿಗೆಯಿಂದ ಮಾತನಾಡುತ್ತಿದ್ದನು.

"ಅಬ್ಬ, ನೀವ್ನನ್ನ ಕಾಪಾಡ್ತೀರ? ಆ ಆ ಬೇಗ ನನ್ಗೆ ನೋಡ್ಬೇಕು. ಹ ಹಾ ಹ ಹಾ!" ಎಂದು ಶೀನ ಶೆಟ್ಟಿಯು ನಕ್ಕುಬಿಟ್ಟನು.

"ನಿನ್ನಂತಹ ಗಂಡುಸು ಹೇಡಿಯಂತೆ ಮಾತನಾಡಿದ ಮೇಲೆ ನಾನು ಮಾತನಾಡಿದುದರಲ್ಲಿ ತಪ್ಪೇನು?"

"ನೋಡೋಣಂತೆ. ಏಳಮ್ಮ ಹೋಗೋಣ" ಎಂದು ಶೆಟ್ಟಿಯು ಹೊರಡಲು ಸಿದ್ಧನಾದನು.

ಚಂದ್ರನ ಬೆಳಕಿನಲ್ಲಿ ಮುಂದಾಗುತ್ತಿದ್ದ ಆ ರಮಾಬಾಯಿಯ ಸೌಂದರ್ಯವನ್ನು ಕೇಳಬೇಕೆ? ಪ್ರಫುಲ್ಲವಾದ ವದನ. ಮನೋಹರವಾಗಿ, ಗುಂಗುರಾಗಿರುವ ಕೇಶಸರಗಳು ಕರ್ಣಮೂಲದಿಂದ ಹರಿದು, ಕಪೋಲದ ಮೇಲೆ ಹರಿದಾಡುತ್ತಿದ್ದುವು. ಹಾಗೂ, ಆಕೆಯ ಶಿರದ ಹಿಂಭಾಗದ ತುರುಬು ಮುಖವೆಂಬ ಕಮಲದ ರಸವನ್ನು ಹೀರಲು ಬಂದ ಕದ್ರುಂಬಿಗಳು ಅಲ್ಲಿ ಅಡಗಿವೆಯೋ ಎಂಬ ಭ್ರಾಂತಿಯನ್ನುಂಟು ಮಾಡುತ್ತಿತ್ತು. ಅಕ್ಷಿಗಳೆರಡು ಚಂಚಲವಾಗಿರದೆ ಕಾಂತಿಮಯವಾಗಿದ್ದುವು. ನೀಟವಾಗಿದ್ದ ಬಾಹುಗಳು ಪುಟ್ಟ ಕೈಬೆರಳುಗಳು, ಗುಲಾಬಿ ವರ್ಣದ ಉಗುರುಗಳು, ಸಂಕ್ಷಿಪ್ತದಲ್ಲಿ, ರಮೆಯು, ಶಾಂತವಾಗಿದ್ದ ನಿಶಿಯಲ್ಲಿ ಸಂಚಾರಕ್ಕೆಂದು ಹೊರಟ ವನದೇವಿಯಂತೆ ಪ್ರಜ್ವಲಿಸುತ್ತಿದ್ದಳು.

ರಮಾಬಾಯಿ, ಶೀನ ಶೆಟ್ಟಿ ಇವರಿಬ್ಬರೂ ಕೆರೆಯ ದಡಕ್ಕೆ ತಲಪಿದರು. ರಮೆಯು ಒಂದು ಶಿಲೆಯ ಮೇಲೆ ಕುಳಿತು, ಚಂದ್ರನ ಬೆಳಕು ಬಿದ್ದು ಚಿಕ್ಕ ಅಲೆಗಳಿಂದ ಕೂಡಿ ಥಳಥಳಿಸುವ ಸರಸಿಯ ಸೊಬಗನ್ನೂ, ಸುತ್ತುಮುತ್ತಲಿನ ಮರಗಳ ಸೌಂದರ್ಯವನ್ನೂ ಈಕ್ಷಿಸುವುದರಲ್ಲಿ ಮಗ್ನಳಾಗಿ ಬಿಟ್ಟಳು. ಸೇವಾ ವೃತ್ತಿಯೇ ಅತೀ ಕಷ್ಟದ್ದೆಂದು ಯೋಚಿಸುತ್ತಾ ಶೆಟ್ಟಿಯು ಒಂದು ಕಡೆ ಕುಳಿತನು. ತಂಗಾಳಿಯು ಬೀಸಿ ಅವನ ಕಣ್ಣುಗಳು ತಾವಾಗಿಯೇ ಮುಚ್ಚಿ ಹೋಗಲು, ಅಲ್ಲೇ ಬಿದ್ದುಕೊಂಡು ಸಂಪೂರ್ಣ ಮೈಮರೆಯುವವನಾದನು.

ಕುರಿಚಲುಗಳ ಮಧ್ಯದಿಂದ ಚರಪರ ಶಬ್ಧವು ಕೇಳಿಬಂದಿತು. ರಮಾಬಾಯಿಯು ಭೀತಿಗೊಂಡು ತತ್ತರಿಸಿದಳು. ಹಾಗೂ, ಆ ಕಡೆ ತಿರುಗಿ ನೋಡಿದಳು! ಎರಡು ಕಣ್ಣುಗಳು ಮಿಣುಗುಟ್ಟುತ್ತಾ ಮುಂದಾಗುವುದನ್ನು ಕಂಡಳು!! ಒಮ್ಮೆಗೇ ಚೀರಿಬಿಟ್ಟಳು. (ಶೆಟ್ಟಿಗೆ ಎಚ್ಚರವಾಗಲಿಲ್ಲ!) ಆ ಎರಡು ಕಣ್ಣುಗಳು ಒಂದು ಚಿರತೆಯದ್ದಾಗಿದ್ದುವು. ರಮೆಯು ಬೆಚ್ಚಿದಳು!—ಅರಚಿದಳು! ಆ ಕಣ್ಣುಗಳು ಮುಂದಾದುವು! ಕೂಗು ಕೇಳಿ ಬಂದ ಕಡೆಗೆ ಒಂದು ಚಿರತೆ ಹಾರಿತು!! ಕೇಳುವುದೇನು? ರಮೆಯು ಪ್ರಜ್ಞೆ ತಪ್ಪಿದವಳಾಗಿ, ಕಲ್ಲಿನ ಆ ಕಡೆ ಸರಸಿಯ ಮೆಟ್ಟಿಲ ಮೇಲೆ ಉರುಳಿದಳು! ಸ್ವಲ್ಪ ಆಚೆಗಾಗುತ್ತಿದ್ದರೆ ಆಕೆಯು ಕೆರೆಗೆ ಬಿದ್ದುಬಿಡುತ್ತಿದ್ದಳು! ಚಿರತೆಗೆ ರಮೆಯು ಕಾಣಲಿಲ್ಲ. ಕಲ್ಲೇ ಅರಚಿತೆಂದು ತಿಳಿದುಕೊಂಡೋ ರಮೆಯು ಕುಳಿತಿದ್ದ ಕಲ್ಲನ್ನೇ ಚಿರತೆಯು ಪರಚುವುದಕ್ಕೂ ಕಡಿಯುವುದಕ್ಕೂ ತೊಡಗಿತು. ಅಷ್ಟರಲ್ಲೇ ಅದು ರಮೆಯನ್ನು ಕಂಡು, ಆ ಕಡೆ ಹಾರುವುದರಲ್ಲಿದ್ದಿತು! ಅದರೇನು? ಮಿಂಚುತ್ತಿದ್ದ ಭಲ್ಲೆಯು ಒಂದು ವಾಯುವೇಗದಿಂದ ಬಂದು, ಚಿರತೆಯ ಕಣ್ಣಿನ ಪಕ್ಕಕ್ಕಾಗಿ ಮಿದುಳಿಗೆ ತಲಪಿತು!! ಚಿರತೆಯು ಅರ್ಭಟಿಯಿಬ್ಬಿಸಿ, ಏಳೆಂಟು ಅಡಿ ಮೇಲಕ್ಕೆ ಹಾರಿ, ನೆಲಕ್ಕೆ ಬಿದ್ದು ಒಡನೆ ಸತ್ತಿತು!!

(11ನೇ ಪುಟವನ್ನು ನೋಡಿರಿ).

"ಲೋಭ!"

(ಕವೀಂದ್ರ ರವೀಂದ್ರರ ಕಥೆಯೊಂದರ ಆಧಾರದಿಂದ)

ಕತೆಗಾರ:-ಅ. ರಾಮಚಂದ್ರ, ಪೂನ.

ಕೃತಘ್ನ- ಪಾಷಾಂಡಿ- ತಾಯನ್ನು ಬಾಲ್ಯದಲ್ಲೇ ಕಳೆದುಕೊಂಡೆ-ತಾಯಿಯಿಲ್ಲದ ಮಗನನ್ನು ಇಷ್ಟೊಂದು ದೊಡ್ಡವನನ್ನಾಗಿ ಮಾಡಲು ಎಷ್ಟೊಂದು ಹಣ ವೆಚ್ಚವಾಯಿತು?- ಹೆಂಡತಿ ಸತ್ತಳೆಂದು ನೀನೂ ಸಾಯುವೆಯಾ?-ಸಾಯುವವರು ಎಂತೂ ಸಾಯುವರು! ಮದ್ದಿನಿಂದ ಮರಣ ತಪ್ಪುವುದೇ? ಮದ್ದು- ಅದಕ್ಕಾಗಿ ಹಣ ವ್ಯಯ! ಇದೊಂದು ನವನಾಗರೀಕತೆಯ ಮಬ್ಬು! ನಿನ್ನ ತಾಯಿಯಾಗಲಿ ಅಜ್ಜನಾಗಲಿ ಸಾಯುವಾಗ ಎಷ್ಟು ಮದ್ದು ತಿಂದಿರುವರು? ನಿನ್ನ ತಾಯಿ ಅಜ್ಜಂದಿಯರಿಗಿಂತ ಹೆಚ್ಚಿನ ಸಂಭ್ರಮವು ನಿನ್ನ ಹೆಂಡಿತಿಗಾಗಬೇಕೇ? ಹೆಂಡತಿ! ಹೆಂಡತಿಯೆಂದರೆ ಅದು ಗೂಡಿನೊಳಗೆ ಬಂಧಿಸಲ್ಪಟ್ಟ ಒಂದು ಮೈನ! ಸಾಕುವವರಿದ್ದರೆ ಮೈನಗಳು ಎಷ್ಟು ಸಿಗಲಿಕ್ಕಿಲ್ಲ! ಎಂದು ಕೋಪದಿಂದ ಕಿಡಿ ಕಿಡಿಯಾದ ಸುಬ್ರಾಯ ಭಟ್ಟರು ಮಗನನ್ನು ಮನೆಯಿಂದ ಹೊರಡಿಸಿ ಬಿಟ್ಟರು.

ಸುಬ್ರಾಯ ಭಟ್ಟರಿಗೆ ಗಿರಿಧರರೆಂಬ ಒಬ್ಬರೇ ಮಗ. ಇವರು ಒಬ್ಬಂಟಿಗರಾಗಿರುವಾಗ ಭಟ್ಟರಿಗೆ ಖರ್ಚು ಅಷ್ಟೊಂದು ವಿಶೇಷವೆಂದು ಕಾಣುತ್ತಿರಲಿಲ್ಲ; ಗಿರಿಧರರಿಗೆ ಮದುವೆಯಾದುದೇ ತಡ- ಖರ್ಚು ಒಂದಕ್ಕೆ ಎರಡಾಯಿತು. ದಿನಂಪ್ರತಿ ಮಗನೊಡನೆ ಜಗಳಕ್ಕಾರಂಭಿಸಿದರು. ಕರ್ಮವಶಾತ್ ಗಿರಿಧರರ ಹೆಂಡತಿಯು ಕಾಯಿಲೆಯಲ್ಲಿ ಬಿದ್ದಳು. ಊರಿನ ದೊಡ್ಡ ವೈದ್ಯರನ್ನೇನೊ ಗಿರಿಧರರು ಕರೆಯಿಸಿದರು. ಆದರೆ ವೈದ್ಯರ ಹಲವು ಮದ್ದುಗಳಿಗೆ ಹಣ ಕೊಡುವವರಾರು? ಗಿರಿಧರರ ಕೈಯಲ್ಲಿ ಚಿಕ್ಕಾಸಿಲ್ಲ. ಭಟ್ಟರೆಂತೂ-ಸಾಯುವವರು ಎಂತೂ ಸಾಯುವರು" ಎಂಬ ಮಾತಿನ ಆದರ್ಶಪುರುಷರು! ಹಾಗೆ ಹೀಗೆಂದು ಗಿರಿಧರರ ಹೆಂಡತಿಯು ತೀರಿಕೊಂಡಳು. ಇದರಿಂದ ಗಿರಿಧರರು ಬಹಳವಾಗಿ ನೊಂದುಕೊಂಡು ತನ್ನ ತಂದೆಯ ಲೋಭತನದಿಂದಲೇ ಹೆಂಡತಿಯು ತೀರಿಕೊಂಡಳೆಂದು ತಂದೆಯನ್ನು ಬಹಳವಾಗಿ ಜರೆದು, ಒಂದು ದಿನ "ನನ್ನ ಹೆಂಡತಿಯನ್ನು ನೀವೇ ಕೊಂದಿರಿ; ನಿಮ್ಮೊಡನೆ ನಾನು ಇರಲಾರೆನು!" ಎಂದು ಹೇಳಿದುದಕ್ಕೆ ಸುಬ್ರಾಯ ಭಟ್ಟರು ಮೇಲೆ ವಿವರಿಸಿದಂತೆ ಕೋಪದಿಂದ ಮಗನನ್ನು ಹೊರಡಿಸಿದರು.

ಮಗನು ಮನೆಬಿಟ್ಟು ಹೋದನೆಂದು ಸುಬ್ರಾಯ ಭಟ್ಟರಿಗೆ ಚಿಂತೆಯಾಗಲಿಲ್ಲ. ಹೆಚ್ಚೆಂದರೆ ಸಂತೋಷವೇ ಆಯಿತು. ಮಗನು ಸೊಸೆಯೊಂದಿಗೆ ಮನೆಯಲ್ಲಿರುವಾಗ, ತನ್ನಲ್ಲಿ ಹಣಕ್ಕಾಗಿ ಎಲ್ಲಾದರೂ ವಿಷವನ್ನು ಇಕ್ಕಿಬಿಟ್ಟರೆ-ಎಂಬ ಭಯ ಭಟ್ಟರಿಗೆ ಬಹಳವಾಗಿದ್ದಿತು. ಸೊಸೆಯು ತೀರಿದ ನಂತರ ಆ ಭಯವು ಕಡಿಮೆಯಾಯಿತು. ಈಗ ಮಗನೇ ದೂರವಾದನೆಂದ ಮೇಲೆ ಸಂಶಯಗಳೆಲ್ಲವೂ ಮಾಯವಾದುವು. ಲೋಭಿಯ ಧನವು ಸಂಶಯದಿಂದಲೇ ನಾಶ! ಲೋಭಿ ಸುಬ್ರಾಯ ಭಟ್ಟರ ಹೃದಯದಲ್ಲಿ ಸ್ವಲ್ಪ ದಯೆಯು ಇತ್ತೆಂದರೆ-ಅದು ನಾಲ್ಕು ವರ್ಷ ಪ್ರಾಯದ ಮೊಮ್ಮಗ ಶಂಭುವಿನ ಮೇಲೆ. ಕಾರಣ, ನಾಲ್ಕು ವರ್ಷದ ಮಗುವನ್ನು ಸಾಕಲು ಖರ್ಚು ವಿಶೇಷವಿಲ್ಲ. ಗಿರಿಧರರು ಮನೆ ಬಿಡುವಾಗ ಮಗನನ್ನೂ ಕರೆದುಕೊಂಡು ಹೋಗಿದ್ದರು.

ಸುಬ್ರಾಯ ಭಟ್ಟರು ಶಂಭುವಿನ ಬಾಲಲೀಲೆಗಳನ್ನು ಆಗಾಗ ಮನನಮಾಡಿಕೊಂಡು ಮನದಲ್ಲೇ ಕೊರಗುತ್ತಿದ್ದರು. ಪೂಜೆಯ ಸಮಯದಲ್ಲಿ ಶಂಭುವು ಹತ್ತಿರವಿದ್ದು ಮಾಡುತ್ತಿದ್ದ ಬಾಲಚೇಷ್ಟೆಗಳು ಅವರ ನೆನಪಿಗೆ ಬರುತ್ತಿದ್ದುವು. ಶಂಭುವು ನೆಲದ ಮೇಲೆ, ಗೋಡೆಗಳ ಮೇಲೆ ಗೀಚುಹಾಕಿದ ಚಿತ್ರಗಳನ್ನು ಕಂಡೊಡನೆ ಮುದ್ದು ಮೊಮ್ಮಗನ ನೆನಪಾಗಿ ಭಟ್ಟರು ಬಹಳವಾಗಿ ನೊಂದುಕೊಳ್ಳುತ್ತಿದ್ದರು. ಬಾಲ ಶಂಭುವಿನ ಅಗಲುವಿಕೆಯಿಂದ ಭಟ್ಟರಿಗೆ ಅರೆ ಘಳಿಗೆಯಾದರೂ ಮನೆಯಲ್ಲಿರಲು ಮನಸ್ಸಿದ್ದಿಲ್ಲ. ಊರ ಮಕ್ಕಳನ್ನಾದರೂ ಕಂಡು ಮನಸ್ಸು ನೆಮ್ಮದಿಯಾಗಲೆಂದು ಸಂಜೆ ಮುಂಜಾನೆ ಮಧ್ಯಾಹ್ನವೆನ್ನದೆ ಎಲ್ಲಾ ಸಮಯದಲ್ಲಿಯೂ ಭಟ್ಟರು ಊರೆಲ್ಲಾ ತಿರುಗಾಡುತ್ತಿದ್ದರು. ಮನಸ್ಸಿಗೆ ಆನಂದವಿಲ್ಲದೆ ಮುದಿ ಪ್ರಾಯದ ಮುಖವು ಕಳೆಗುಂದಿ ಹರಕು ಬಟ್ಟೆಯನ್ನುಟ್ಟು ಲೋಭದಿಂದ ಅನಲಂಕೃತರಾಗಿ ಮೆರೆಯುವ ಭಟ್ಟರನ್ನು ಕಂಡು ಪೇಟೆಯ ಹುಡುಗರೆಲ್ಲರೂ ಗೋಳೋ ಎಂದು ನಗುತ್ತಾ ದೂರ ದೂರ ಓಡುವರು. ಸುಬ್ರಾಯ ಭಟ್ಟರೆಂದರೆ ಹುಡುಗರಿಗೆ ವಿನೋದವೆನಿಸುತ್ತಿತ್ತು. ಹಾಗೆಂದು, ಯಾರೂ ಹತ್ತಿರ ಬರುತ್ತಿರಲಿಲ್ಲ. ಲೋಭಿಯ ವೇಷ, ರೂಪುಗಳೇ ಹಾಗೆ.

ಒಂದು ದಿನ ಮಧ್ಯಾಹ್ನ ಸುಬ್ರಾಯ ಭಟ್ಟರು ತನ್ನ ಎಂದಿನ ಸಂಚಾರಕ್ಕೆ ಹೊರಟಿದ್ದಾಗ ಅಲ್ಲೊಂದು ಮರದಡಿಯಲ್ಲಿ ಆಡುತ್ತಿದ್ದ ಹುಡುಗರ ಗುಂಪಿನಿಂದ ಒಬ್ಬ ಹುಡುಗನು ಭಟ್ಟರನ್ನು ಕಂಡು ಇತರ ಹುಡುಗರಂತೆ ದೂರಕ್ಕೆ ಓಡದೆ ಹತ್ತಿರದಲ್ಲೇ ನಿಂತುಕೊಂಡು ನಗುತ್ತಿದ್ದನು- ಯಾರಿಗೂ ಬೇಡವಾದ ಭಟ್ಟರು, ಈ ಹುಡುಗನು ಹತ್ತಿರದಲ್ಲೇ ನಿಂತಿರುವುದನ್ನು ಕಂಡು ಬಹಳ ಸಂತೋಷಿತರಾಗಿ, ಅವನನ್ನು ಹತ್ತಿರಕ್ಕೆ ಕರೆದು, 'ನಿನ್ನ ಹೆಸರೇನಪ್ಪಾ' ಎಂದು ಕೇಳಿದರು.

'ಚಕ್ರಪಾಣಿ'

'ನಿನ್ನ ಮನೆಯೆಲ್ಲಿ?'.

'ಅದನ್ನು ಹೇಳಲಾರೆ'

'ನಿನ್ನ ತಂದೆಯಾರು?'

'ಅದನ್ನೂ ಹೇಳಲಾರೆ'

'ಮಗೂ ಏಕೆ ಹೇಳಲಾರೆ?'

'ನಾನು ತಂದೆಗೆ ಹೇಳದೆ ಮನೆಯಿಂದ ಓಡಿ ಬಂದಿರುವೆನು.'

'ಅದೇಕೆ- ಹಾಗೆ ಮಾಡಿದೆ?'

'ತಂದೆಯು ನನ್ನನ್ನು ಶಾಲೆಗೆ ಕಳುಹಿಸುವನಂತೆ. ಅದಕ್ಕಾಗಿ'

'ಸಣ್ಣ ಸಣ್ಣ ಮುದ್ದು ಮಕ್ಕಳನ್ನು ಶಾಲೆಗೆ ಕಳುಹಿಸಿ ಸುಮ್ಮಗೆ ಹಣ ವ್ಯಯ ಮಾಡುವ ನಿನ್ನ ತಂದೆಗೆ ಬುದ್ಧಿ ಇಲ್ಲ. ನೀನು ನನ್ನ ಮನೆಗೆ ಬರುವೆಯಾ?-ನಾನು ನಿನ್ನನ್ನು ಶಾಲೆಗೆ ಕಳುಹಿಸುವುದೇ ಇಲ್ಲ.

ಚಕ್ರಪಾಣಿಯು ಸುಬ್ರಾಯ ಭಟ್ಟರ ಮಾತಿಗೊಪ್ಪಿ ಅವರ ಮನೆಗೆ ಹೋದನು. ಭಟ್ಟರ ಮನಸ್ಸೇನೋ ಈಗ ಸ್ವಲ್ಪ ಶಾಂತಿಗೊಂಡಿತು. ಚಕ್ರಪಾಣಿಯು ಭಟ್ಟರ ಮನೆಯನ್ನು ತನ್ನ ಸ್ವಂತ ಮನೆಯಂತೆಯೂ, ಭಟ್ಟರು ತನ್ನ ಅಜ್ಜನೆಂದೂ ಅಧಿಕಾರದಿಂದಲೇ

ವರ್ತಿಸುತ್ತಿದ್ದನು. ಮಾತ್ರ, ನೆರಿಕರೆಯವರು ಏನೇನೋ ಹೇಳಿ ಕೊಳ್ಳುತ್ತಿದ್ದರು. 'ಮಗ ಮೊಮ್ಮಗರಿಬ್ಬರೂ ಭಿಕಾರಿಯಾಗಿ ಎಲ್ಲೋ ತಿರುಗಾಡುತ್ತಿರುವರು. ಉಣ್ಣದೆ ತಿನ್ನದೆ ಕೂಡಿಸಿಟ್ಟ ಇಷ್ಟೊಂದು ಹಣವು ಯಾವುದೋ ಒಬ್ಬ ತುಂಟ ಹುಡುಗನಿಗೆ ಹೋಗಲಿಕ್ಕಿದೆ' ಎಂದು. ಮನೆಬಿಟ್ಟು ಓಡಿ ಬಂದಿರುವ ಅವಿಧೇಯ ಚಕ್ರಪಾಣಿಯನ್ನು ಪದೇ ಪದೇ ಹಳಿಯುತ್ತಲೂ ಇದ್ದರು.

ಹೀಗೆ ಕೆಲವು ದಿವಸಗಳು ಕಳೆದ ನಂತರ, ವೆಂಕಟರಮಣನೆಂಬವರು ತನ್ನ ಮಗ ಚಕ್ರಪಾಣಿಯನ್ನು ಊರಲ್ಲೆಲ್ಲಾ ಹುಡುಕುತ್ತಿರುವರು ಎಂಬ ಸುದ್ದಿಯು ಹರಡಿತು. ಇದನ್ನು ಕೇಳಿ ಚಕ್ರಪಾಣಿಯು ತಳಮಳಿಸಿದನು. ಪರಂತು, ಸುಬ್ರಾಯ ಭಟ್ಟರು ಅವನನ್ನು ಸಂತಯಿಸಿ 'ನೀನು ಹೆದರಬೇಡ. ನಿನ್ನನ್ನು ನಿನ್ನ ತಂದೆಯಿಂದ ಅಡಗಿಸಿಡುವೆನು—ಅಲ್ಲದೆ ನನ್ನ ಸರ್ವಸ್ವವನ್ನೂ ನಿನಗೇನೇ ಕೊಡುವೆನು'' ಎಂದು ಹೇಳಿ ಅಡಗಿಸಿಡುವ ಸ್ಥಳದ ಏರ್ಪಾಡಿಗಾಗಿ ಹೊರಹೋದವರು ರಾತ್ರಿ ಎಂಟು ಘಂಟೆಗೆ ಮನೆಗೆ ಬಂದರು. ತಂದೆಯಿಂದ ಅಡಗಿರಬೇಕೆಂಬ ಆತುರವು ಚಕ್ರಪಾಣಿಗೆ ನಿಮಿಷ ನಿಮಿಷಕ್ಕೂ ಹೆಚ್ಚುತ್ತಾ, ಭಟ್ಟರನ್ನು ಆಗಾಗ್ಗೆ ಪ್ರಶ್ನಿಸುತ್ತಿದ್ದನು. ಭಟ್ಟರು 'ಸ್ವಲ್ಪ ನಿಲ್ಲು. ರಾತ್ರಿಯಾಗಲಿ, ಜನರೆಲ್ಲರೂ ಮಲಗಲಿ. ಆ ಮೇಲೆ ಕೊಂಡುಹೋಗುವೆನು'' ಎಂದು ಹೇಳಿದರು.

ಮಧ್ಯರಾತ್ರಿಯಾಯಿತು. ಚಕ್ರಪಾಣಿಯ ಕೈ ಹಿಡಿದುಕೊಂಡು ಸುಮಾರು ಒಂದು ತಾಸಿನ ಕಾಡುಹಾದಿಯನ್ನು ನಡೆದ ನಂತರ ಯಾವುದೋ ಒಂದು ಹಾಳುಬಿದ್ದಿರುವ ದೇವಾಲಯವನ್ನು ಹೊಕ್ಕು, ಅಲ್ಲೊಂದು ಮೂಲೆಗಿದ್ದ ನೆಲಮಾಳಿಗೆಯೊಳಗೆ ಕರೆದುಕೊಂಡು ಹೋದರು. ಆ ನೆಲಮಾಳಿಗೆಯಲ್ಲಿನ ಒಂದು ಮೂಲೆಯಲ್ಲಿದ್ದ ದೊಡ್ಡ ಹೊಂಡವೇ ಸುಬ್ರಾಯ ಭಟ್ಟರ ಖಜಾನೆಯಾಗಿತ್ತು. ಭಟ್ಟರು ಅದನ್ನು ಚಕ್ರಪಾಣಿಗೆ ತೋರಿಸಿ, ಧನದ ರಾಶಿಗೆ ಪೂಜೆ ಮಾಡಿದರು. (ಇದು ಲೋಭಿಯ ಧರ್ಮ) ಅನಂತರ ಚಕ್ರಪಾಣಿಗೆ ಹೀಗೆಂದು ಉಪದೇಶಿಸಿದರು. ''ನೀನು ಇಲ್ಲೇ ಇರು. ಈ ಹಣವೆಲ್ಲವೂ ನಿನ್ನದು. ಆದರೆ, ಮಾತ್ರ ನನ್ನ ಮೊಮ್ಮಮಗ ಶಂಭುವಾಗಲೀ, ಅವನ ಮಗನಾಗಲಿ, ಯಾ ಅವನ ಮೊಮ್ಮಗನಾಗಲೀ, ಈ ದಾರಿಯಾಗಿ ಬಂದರೆ ಅವರಿಗೆ ಕೊಡತಕ್ಕದು'' ಎಂದು ಹೇಳಿ ಮೇಲಕ್ಕೆ ಬರುತ್ತಿದ್ದರು. ತನ್ನನ್ನೊಬ್ಬನನ್ನೇ ಬಿಟ್ಟು ಹೋಗುತ್ತಿರುವ ಭಟ್ಟರನ್ನು ಕಂಡು ಹುಡುಗನು ಸ್ವಲ್ಪ ಗಾಬರಿಗೊಂಡು—''ಅಜ್ಜಾ, ಎಲ್ಲಿಗೆ ಹೋಗುವಿರಿ? ನಾನು ಬರುವೆನು. ನಾನು ತಂದೆಯಲ್ಲಿಗೆ ಹೋಗುವೆನು'' ಎಂದು ಹೇಳಿದನು. ''ಇಲ್ಲ, ನೀನು ಇಲ್ಲೇ ಅಡಗಿರು. ನಿನ್ನನ್ನು ಇಲ್ಲಿ ಯಾರೂ ಕಾಣರು' ಎಂದು ಹೇಳುತ್ತಾ ಭಟ್ಟರು ಮೇಲಕ್ಕೆ ಬಂದು ನೆಲಮಾಳಿಗೆಯ ಬಾಗಿಲನ್ನು ಭದ್ರಪಡಿಸಿದರು. ''ನಾನು ನನ್ನ ತಂದೆಯಲ್ಲಿಗೆ ಹೋಗುವೆನು' ಎಂಬ ಧ್ವನಿಯು ಕೇಳುತ್ತಿದ್ದಂತೆ ಭಟ್ಟರು ನಡೆದುಬಿಟ್ಟರು. ಇಷ್ಟೆಲ್ಲಾ ಕೆಲಸವಾಗಬೇಕಾದರೆ ಬೆಳಕು ಹರಿಯಿತು.

ಸುಬ್ರಾಯ ಭಟ್ಟರು ಗ್ರಹಾಭಿಮುಖವಾಗಿ ಹೋಗುತ್ತಿರುವರು. ಯಾರೋ ಒಬ್ಬನು ಹಿಂದಿನಿಂದ ''ಅಪ್ಪಾ, ನನ್ನ ಮಗನು ನಿಮ್ಮಲ್ಲಿ ಅವಿತಿರುವನಂತೆ. ಎಲ್ಲಿರುವನು? ಕೊಡಿರಿ'' ಎಂದು ಕೂಗಿಕೊಂಡು ಓಡಿ ಬರುತ್ತಿರುವುದನ್ನು ಸುಬ್ರಾಯ ಭಟ್ಟರು ನೋಡಿ, ''ಯಾರು ನಿನ್ನ ಮಗ?'' ಅಹುದು ನನ್ನ ಮಗ ಶಂಭು—ಈಗ ಚಕ್ರಪಾಣಿ—ಅಂತೆಯೇ ನನ್ನ ಹೆಸರು ಗಿರಿಧರ ಯಾ ವೆಂಕಟರಮಣ'' ಎಂದರು. ಇದನ್ನು ಕೇಳಿ ಲೋಭಿಯ ಮಬ್ಬು ಕರಗಿ ನೀರಾಗಿ ಧಾರೆಯಾಗಿ ಹೊರಹೊಮ್ಮಿತು. ಕಂಠವು ಬಿಗಿದುಕೊಂಡಿತು. ಕೈಕಾಲುಗಳು ನಡುಗಲಾರಂಭಿಸಿದುವು. ಹಾಳು ದೇವಾಲಯದ ನೆಲಮಾಳಿಗೆಗೆ ಮಗನನ್ನು ಕರೆದೊಯ್ದರು. ಆದರೆ ಗಾಳಿ ಸಂಚಾರವಿಲ್ಲದ ಕಗ್ಗತ್ತಲೆ! ಆ ನೆಲಮಾಳಿಗೆಯಲ್ಲಿ ಶಂಭುವು ಎಲ್ಲಿರುವನು! ಇರಲಿಕ್ಕೆ ಇದ್ದನು! ಅವನ ಹೆಣ—ಅದರೊಡನೆ ಲೋಭಿಯ ಹಣ!

ಸ್ವಂತ ಸೊಸೆಯು ಮಡಿದಳು, ಮಗನು ಮನೆಬಿಟ್ಟನು; ಮೊಮ್ಮಗನು ತನ್ನ ಕೈಯಿಂದಲೇ ಮಡಿದನು.— **ಲೋಭ.**

ಶಾರದಾ.

(ಕಂದ)

ದೇವಿ ಸರಸ್ವತೆ ಭಗವತೆ ।
ಶಿವಸತಿ ವಂದಿತೆ ಮದೀಯ ಮಾತೆ ಪ್ರೀತೇ ॥
ಸುವಿಚಾರದಾತೆ ಸುಖಕೃತೆ ।
ತವಪಾದಯುಗ ತಲದೊಳ್ ಮಣಿವೆನಾಂ ಲೀಲೆ ॥ ೧ ॥

ಅರುಣನುದಯಿಸಲ್ ತಿಮಿರಂ ।
ಜಾರುವ ತೆರನಂ ಸುರನಮಿತೆ ವಚನ ರಾಣಿ ॥
ಪರಮ ಪ್ರೇಮಾರುಣದಿಂದ ।
ಕರಿ ತಿಮಿರಾಜ್ಞಾನವಂ ತೊಲಗಿಸೆಲೆ ಮಾತಾ ॥ ೨ ॥

ವಿದ್ಯಾಸಾಗರ ಯುವತಿಂ ।
ಸದ್ಗುಣನೊರೆಯಿಂ ಕಲಾತರಂಗಾವಳಿಯಿಂ ।
ಸದ್ಧರ್ಮಮತ್ಸ್ಯಪಡೆಯಿಂ ।
ಬುದ್ಧಿವಿಶಾಲ ಧರೆಯೊಳ್ ಮೆರೆಯುವಳ್ ಜಗದೊಳ್ ॥ ೩ ॥

ವದನಂ ಕಮಲದ ಸಿರಿಯಿಂ ।
ವಿಧ ವಿಧದಿಂ ಬಳಕುವ ತನುನಾಳದ ಸೊಬಗಿಂ ।
ಸದಮಳತನು ಕಾಂತಿಯದುಂ ।
ವಿದ್ಯಾಜಲಧಿಯ ಸೌಭಾಗ್ಯದಿಂ ಮೆರೆಯುವುದುಂ ॥ ೪ ॥

ಕರದೊಳ್ ಪಿಡಿದಿಹ ವೀಣಾ ।
ಸರಂ ಜಲಂ ಪಾಡ್ವವೊಲ್ ಸುರಸಮಾಗಿಹುದುಂ ॥
ಕರಿಕೇಶರಾಶಿಮೆಸಗುವ ।
ಮರಿಹಂಸಂ ಜಲಜದೊಡನೆಸೆವ ಪರಿ ತೋರ್ಗುಂ ॥ ೫ ॥

(ಭಕ್ತಿಗರ್ಭಿತ ವರ್ಣನೆಯಿದು ಸಂ. ಬ. ಬ.)

ಮಿಜಾರ್ ಪದ್ಮನಾಭ ಭಂಡಾರಿ.

Wake up! Wake up!!

(By 'Servant')

Wake up! Shake up!! my comrades dear,
Shirk ye not, lurk ye not, but come
With renewed vigour, with spirit anew,
To save thy Motherland from the jaws of death.
'Unity, unity, unity,' be thy slogan,
Maternity thy watch-word for ever and ever.
Embrace ye all as thy kith and kin,
Caste and customs are but atoms,
In the Infinite glory of Love thou should win.
Look! the depressed, suppressed and oppressed Harijans
Are none but the flesh of thy flesh and soul of thy soul.
To them is due thy tender care and love
Thy compassion and not contempt
Superstition is perdition and love Divine
Scriptures are vultures for lunatics and fanatics,
But for culture are scriptures for virtuous;
Away then with tyranny and fanaticism
And the Kingdom of Heaven will be Thine.
Comrades, come, come ye all and call aloud
For Lord to rain concord and peace on all.

The woes of the untouchables.

The despicable prejudice of untouchability
Is an intolerable inhuman iniquity.
On the Hindu Community it's a filthy blot
And on Humanity it's a callous onslaught.
Those who dare deny entry,
To the lowest of the low
And the darkest Negro
To the temple of the deity,
Create artificial distinctions in the Community.
And insult their own perverted mentality!

From the Yerrowada Prison
A death-blow has been given
To the heartless demon of untouchability,
By the half-naked Fakir of Sabarmathi.
Will the sections of high caste Hinduism
Show their high-mindedness and ardent patriotism
By burying alive the half dead monster of untouchability,
In the cemetry of their age-long bigotry?

A MUSLIM PATRIOT.

(ಈ ಮುಸ್ಲಿಮ ರಾಷ್ಟ್ರಾಭಿಮಾನಿಗಳ ಈ ಯತ್ನವು ಶ್ಲಾಘನೀಯವಿದೆ ಸಂ. ಬ. ಬ.)

ವೀರರ ಕರೆ

(ಭರತ ಮಾತೆಯೆ, ಭರತ ಮಾತೆಯೆ ಎಂದು ನೀ ತಲೆಯೆತ್ತುವೆ, ಎಂಬಂತೆ)

ಹಿಂದು ವೀರರೆ! ಬಂಧು ಮಿತ್ರರೆ! ಎಂದು ಧರ್ಮವ ಪೊರೆವಿರಿ? ।
ಹಿಂದೆ ಸಂದಿಹ ಹಿಂದು ಧರ್ಮದ ಪಥವನೆಂದಿಗೆ ತರುವಿರಿ ? ।
ಧರ್ಮ ತತ್ವವನರಿಯಿರಿ—ವರ
ಕರ್ಮ ವೀರರು ಎಣಿಸಿರಿ.
ಧರ್ಮ ಕರ್ಮವ ರಕ್ಷಿಸುತ ನೀವ್ ಪ್ರೇಮದಿಂದಲಿ ನಡೆಯಿರಿ
ಧರ್ಮ ಬಾಹಿರ ಅಂಧಶ್ರದ್ಧೆಯ ಮರ್ಮ ಭೇದವ ಮುರಿಯಿರಿ
ಹಿಂದುಗಳನಾದರಿಸಿರಿ—ಆ
ನಂದ ಪ್ರೇಮವ ಬೆಳಗಿಸಿ.
ಪತಿತರುನ್ನತಿ ಮಾಡಿ ಧರೆಯೊಳು ಜಾತಿ ಭೇದವ ಕೆಡಹಿರಿ.
ಪತಿತರೆಂಬವನತಿಯ ಜನಗಳ ಹಿತವ ಸರ್ವದ ಬಯಸಿರಿ.
ಹಿಂದುಧರ್ಮವನರಿಯಿರಿ—ಮಹ
ಹಿಂದು ಜಾತಿಯ ರಕ್ಷಿಸಿ.
ಜನ್ಮ ಘನತೆಯ ಮೇಲ್ಮೆಯಲಿಯನ್ಯಾಯ ಸಾಧಿಸ ಬೇಡಿರಿ
ಜನ್ಮದಿಂದಲಿ ಘನತೆ ಬಾರದು ಕರ್ಮದಿಂದಲೆ ತಿಳಿಯಿರಿ
ಕರ್ಮ ತ್ಯಜಿಸಲು ಬೇಡಿರಿ—ಅದು
ನಿಮ್ಮ ಕೆಡಿಪುದು ತಿಳಿಯಿರಿ!
ರಾಮ ಮೋಹನ ಸ್ವಾಮಿ ವಿವೇಕಾನಂದರೆಲ್ಲರ ನೆನಯಿರಿ.
ಸ್ವಾಮಿ ಸ "ದಯಾನಂದ ಋಷಿನರ" ವೀರದಂಡಿಯ ನೆನಯಿರಿ
ಜನ್ಮದಿಂ ಘನ ವಿಪ್ರರು—ನರ
ಜನ್ಮ ಭೂಷಣಪ್ರಾಯರು.
ಬ್ರಾಹ್ಮಣತ್ವದ ಶ್ರೇಷ್ಠ ತತ್ವವ ಕಲಿಯ ಬೇಕಿವರಿಂದಲೆ
ಬ್ರಹ್ಮ ತೇಜದಿ ಸ್ತ್ರೀಸುಧಾರಣೆ ಅರಿಯ ಬೇಕಿವರಿಂದಲೆ
ಬಾಲವಿಧವೆಯ ಗೋಳನು—ನೀ
ವಳಿಸಿ ನಡೆಸಿ ವಿವಾಹವು.
ದೇಶಧರ್ಮವ ತ್ಯಾಗಬುದ್ಧಿಯ ಅನುಜಪ್ರೇಮವ ತೋರುವಾ
ದೇಶಪ್ರೇಮಿಯೆ ಭೂವಲಯದೊಳ್ ಸಿರತ ಯಶದಲಿ ಮೆರೆಯುವ
ನೆಂಬ ಸಾರವ ಗ್ರಹಿಸಿರಿ—ಮನ
ವೆಂಬ ಮಂದಿರ ತೆರೆಯಿರಿ.

ವಿ. ಸತ್ಯಾರ್ಥಿ ಸಿದ್ಧಾಂತ ವಿಶಾರದ.

"ತಾವರೆ"

(ಬರೆದವ—ಕವಿ, ಮಧ್ವರಾಜ ಮಹಿಷಿ "ತುಂಟರ ತಂಡ" —ಬೆಳಗಾಂವಿ)

೧

ರವಿಯು ಮೂಡಲು ಪಡುವಲಿನಲಿ
ತಾವರೆಯರಳಿತು ಜಲಧಿಯಲಿ
ಆವದೋ ಭಾವನೆಯದು
ಆವದೋ ಹೊಸ ನಗೆಯನದು
ಸೂಚಿಸುತಲಿಹುದು
ತೋರಿಸುತಲಿಹುದು.
ಆವದಾ ಭಾವನೆಯದು ತಾ?
ಆವದಾ ಹೊಸ ನಗೆಯದು ತಾ?
ರವಿ, ತನ್ನ ಇನಿಯ ಬಹನೆಂದು
ಅವನಿಗೆ ಪ್ರೇಮ ತಿಳುಹಲೆಂದು
ಆ ಭಾವ ಇಹುದು
ಆ ನಗೆಯು ಇಹುದು.

೨

ತನ್ನ ಇನಿಯಳ ನಗೆಯ ಕಂಡು
ತಾನೊಂದು ಹೊಸ ನಗೆಯ ಕೊಂಡು
ಆ ನಗೆಯ ಸವಿಯುವುದಕೆ ಎಂದು
ಆನಂದದಲಿ ಓಡಿ ಬಂದು
ಕೂಡಿ ಇನಿಯಳನು
ಆಡಿ ನಲ್ಮೆಯನು
ಕೂಡಿ ಮಂದಾದಪ್ಪೆ ಪ್ರೇಮ
ಆಡಿ ನಲ್ಮೆಯ ಮಾತುಗಳನು
ಕೂಡಿ ವಿಹರಿಸಿ ಆನಂದದಲಿ
ಕ್ರೀಡೆಯಿಂ, ತಿಳಿದೆದ್ದು ನಡೆದ
ಕಡು ವೇಗದಿಂ
ಪಡುವಣಕೆ ಮುದದಿ

೩

ಆಗಸೆಡೆದ ಮಾಡಿರುವ ಮೊಗ
ಮುಗಡೆ ಬಾಡಿಸಿ ಕೆಳಗೆ ಮಾಡಿ
ಮಿಗೆ ದುಃಖ ಪೊಂದುತಲೆಂದಿತು
"ನಗೆ ಮೊಗದ ರವಿ ಕಾಂಬನೆ?"
ಎನ್ನುತ ಮರುಗಿತು
ಕುಂದುತ ನಡೆಯಿತು
ಅರೆ ನಿಮಿಷ ಈ ಜಗದ ಸುಖವು
ಸ್ಥಿರವಲ್ಲವೆಂಬುದನರಿತು
ಕೊರಗಿ ಶಾಂತಿ ಪೊಂದುವದಕೆ
ಒರಗಿತು ದಡಕೆ ಭ್ರಾಂತಿಯಿಂ
ಸ್ಥಿರವೇ ಸುಖವೆ?
ಸ್ಥಿರವೇ ದುಃಖ?

"ಇದನ್ನು ಬರೆದುದು ೧೩ ವರ್ಷ ವಯಸ್ಸಿನ ಬಾಲಕ. 'ತಾವರೆ' ಎಂಬ ಕೈಬರಹದ ಮಾಸಪತ್ರಿಕೆಯನ್ನು ಬೆಳಗಾಂವಿಯಲ್ಲಿ ಪ್ರಕಟಿಸಿ 'ತುಂಟರ ತಂಡ'ದ ಸದಸ್ಯರಲ್ಲೊಬ್ಬನಾಗಿದ್ದಾನೆ. ಇಂಗ್ಲಿಷ ೯ನೇ ಕ್ಲಾಸಿನಲ್ಲಿ ಓದುತ್ತಲಿದ್ದಾನೆ." ಎಂದು ಶ್ರೀ ಎಸ್. ಎಸ್. ಪ್ಯಾಟಿಯವರು ತಿಳಿಸುತ್ತಾರೆ. ಬಾಲಕರು ಈ ಬಾಲಕನಿಯನ್ನನುಸರಿಸಲಿ—ಸಂ. ಬ. ಬ.

* * * * *

"ಹೆಮ್ಮೆ ಎರಟಪ್ಪಮ್ಮ"

(ಒಂದು ಸಾಲು ಮಗನು, ಮತ್ತೊಂದು ಸಾಲು ತಾಯಿಯು ಎನ್ನುತ್ತಾರೆ. ಕಡೆ ಪದ್ಯವನ್ನು ಮಗನೊಬ್ಬನೇ ಅನ್ನುತ್ತಾನೆ.) (ಬಾಲಕೇಳಿ)

'ಏಳಮ್ಮ ದಾರಿಬಿಡು. ಬಂದನಪ್ಪನು ನೋಡೆ'
'ಏನು ಸೊಕ್ಕೆಲೊ ನಿನಗೆ ಎದೆಯನುಬ್ಬಿಸಿ ನಡೆವೆ'
'ಬಹಳಮ್ಮ ನಿನಗೆ, ಬಲು ಹೆಚ್ಚಮ್ಮ, ಬಲು ಬಹಳ'
'ಏನೋ ಅದು? ಎಲೆ ಪುಂಡ ಬಲು ಹೆಚ್ಚು ನನಗೇನು?' ॥ ೧ ॥

'ಹೇಳದಲೆ ನಾ ಪುಂಡ ಹೇಳಿದರೆ ಬಡಿಯುವಿಯೆ?
'ಬಡಿದರವರಲ್ಲಿ ದೂರುವೆಯಂತ ಆಯಿತೆ'
'ಅಂಜಿಕೆಯೆ ಏಳದಿರುವಳಿಗೆ? ನಿನಗಿರುವದದು ತಾ ಬೇರೆ!
'ಏನು ಸೊಕ್ಕೆಲೊ ನಿನಗೆ ಕೇಳಿದರೆ ಹೇಳದಿಹೆ?' ॥ ೨ ॥

'ಆರ ಬಾಯಲಿ ಬಂತೆ, ಎದೆ ತುಂಬಿ ಹೆಚ್ಚಾಗಿ'
'ಎಲೆ ತುಂಟ! ನನಗೇತರದೊ ಹೆಮ್ಮೆ? ಹೇಳದನು!'
'ಜಾಣ ಮಗನನು ಪಡೆದ ಹೆಮ್ಮೆ ನಿನಗಿಲ್ಲೇನೇ?'
'ನಿನ್ನ ಹಡೆದವರಿಗಿಲ್ಲೇನೊ ತಾನಾ ಹೆಮ್ಮೆ? ॥ ೩ ॥

'ಇಲ್ಲಮ್ಮ. ಅಪ್ಪನಲಿ ಕಾಣುವದೆ? ಎಲ್ಲಿಹುದೇ?'
'ನಿಮ್ಮಿಬ್ಬರಿಗೆ ಹೆಮ್ಮೆ; ಹೆಣ್ಣು ಮಕ್ಕಳಿಗೆಲ್ಲಿ?'
'ಹೆಂಗಸರಿಗೆರಡರಷ್ಟು- ನಮ್ಮಿಬ್ಬರದು ನಿನಗೆ.'
'ತೋರೊ, ಏಕಿಲ್ಲ ನಿಮಗೆರಡರಷ್ಟು ನನಗೆಂತು' ॥ ೪ ॥

'ನೀನು ನಿಲ್ಲುವದಿಲ್ಲ, ನಾನು ತೋರುವುದಿಲ್ಲ.'
'ಇಕೊ ಏಳುವೆನು ತೋರು; ಜಾಣನಾದರೆ ನೀನು.'
'ಒಂದೆರಡು ಹೆಜ್ಜೆಗಳನಿಡು ಮುಂದೆ ತೋರುವೆನು'
'ಇಕೊ ನಡೆವೆ. ಸೆರಗನೇಕೆಲೊ ಸೆಳೆವೆಯದನು ಬಿಡು' ॥ ೫ ॥

'ನೀನು ಬಿಡು ಸೆರಗನ್ನು ಮುಚ್ಚುವದೇತಕಮ್ಮ ।
ಅಪ್ಪನೆದೆಯುಬ್ಬಿಲ್ಲ ನನ್ನೆದೆಯಲುಬ್ಬಿಲ್ಲ ॥
'ನೋಡೀಗ ನೀನು ನಡೆಯುತಲಿರುವೆ, ನೋಡಲ್ಲಿ ।
ಎರಡು ಕಡೆ ನಿನ್ನೆದೆಯು ಚೆನ್ನಾಗಿಯುಬ್ಬಿಹುದು ॥ ೬ ॥

ಬರೆದವ:—"ರಸದಿರುಕ" ಹೈದರಾಬಾದ್.

"ಬಡವರ ಬಂಧು"ವಿನ

ಒಂದು ವರುಷದ ಕರ್ನಾಟಕ ಸೇವೆಯ ಕುರಿತು ತಜ್ಞರು ತಂತಮ್ಮ ಅಭಿಪ್ರಾಯಗಳನ್ನು ಬರೆದು ಕಳುಹಿಸಿದರೆ ಉಪಕಾರವಿತ್ತು.

ಸಂಪಾದಕ.

ನನ್ನ ಶಾಲಿ!

(ಬಡವನೊಲುಮೆ ಅಥವಾ ಕೂಲಿಯೊಲವು)

೧

ಎಲ್ಲ ಹುಡುಗಿಯರ ಮೀರಿಸಿದವಳು-
ಚುರುಕಿನಲೆನ್ನ ಶಾಲಿ!
ಎನ್ನೆದೆಯ ತನಿವಳ್ಳಿ-ಎನಗವಳು-
ಬಲುಮುದ್ದೆನ್ನ ಶಾಲಿ!
ಅವಳಂತೆ ಸೊಗಸೆನಗೆ-ನಾಡಿನೊಳು,
ಬೇರಿಲ್ಲ ಹುಡುಕಿದರು-
ಎನ್ನೆದೆಯ ತನಿವಳ್ಳಿ-ಎನಗವಳು-
ಬಲು ಮುದ್ದೆನ್ನ ಶಾಲಿ!

೨

ಅವಳೆನ್ನ ಬಳಿ ಸಾರೆ ನಾ ಮರೆತು,
ನಿಲ್ಲಿಸುವೆ ಕೆಲಸವನು;
ಧಣಿ ಬಂದು ಕ್ರೂರ ಟರ್ಟರನಂತೆ,
ಹೊಡೆಯುವನು ಹೆಚ್ಚಾಗಿ;
ಹೊಡೆಯಲವ ಹೊಟ್ಟೆ ತುಂಬುವ ತನಕ,
ಸಹಿಸುವೆನು ಶಾಲಿಗಾಗಿ!
ಎನ್ನೆದೆಯ ತನಿವಳ್ಳಿ-ಎನಗವಳು-
ಬಲು ಮುದ್ದೆನ್ನ ಶಾಲಿ!

೩

ವಾರದಲಿ ಬರುವೆಲ್ಲ ದಿನಗಳಲಿ,
ಒಂದೆನಗೆ ಅತಿ ಹಿತವು;
ಇಂದು ಮುಂದಗಳ ಮಧ್ಯದಿ ಬರುವ,
ಅದಿತ್ಯವಾ ದಿನವು.
ನಾನಂದು ತೇಜದುಡೆ ಧರಿಸುತಲಿ,
ನಡೆಯೆ, ಸೇರುವಳು ಶಾಲಿ!
ಎನ್ನೆದೆಯ ತನಿವಳ್ಳಿ ಎನಗವಳು-
ಬಲು ಮುದ್ದೆನ್ನ ಶಾಲಿ!

೪

ಎನ್ನ ಧಣಿ ದೇಗುಲಕೆನ್ನನೊಯ್ವ,
ಬಲು ವೇಳೆ ಬಹುಬಯ್ವ;
ಏಕೆನಲು ನಾನವಗೆ ವಂಚಿಸುತ—
ಮಂಗಳದ ಮೊದಲಿನಲೆ,
ಹೊರ ಜಾರಿ ನುಸುಳುತ್ತ ಸೇರುವೆನು
ಚಲುವಿನಾ ಶಾಲಿಯನು!
ಎನ್ನೆದೆಯ ತನಿವಳ್ಳಿ—ಎನಗವಳು—
ಬಲು ಮುದ್ದೆನ್ನ ಶಾಲಿ!

Alas! Nobody in our country thinks for the low, the poor and the miserable! Those that are the backbone of the nation, whose labour produces food, those whose one day's strike from work raises a cry of general distress in the city—where is the man in our country who sympathises with them, who shares in their joys and sorrows?...... You are continually telling them: "Don't touch me!" "Don't touch this or that!" Is there any fellow-feeling or sense of Dharma left in the country? There is only 'Don't touchism' now! Kick out all such degrading usages! How I wish to demolish the barriers of 'Don't touchism' and go out and bring them together one and all, crying 'Come, all you that are poor and destitute, fallen and down-trodden! We are one in the name of Rama krishna!'

* * *

Do you feel? Do you feel that millions and millions of the descendants of gods and sages have become next-door neighbours to brutes? Do you feel that ignorance has come over the land like a dark cloud?...For centuries people have been taught theories of degradation. They have been told all over the world that they are not human beings. They have been so frightened for centuries that they have nearly become animals; never were they allowed to hear of the *Atman*. Let them hear of the *Atman*—that even the lowest of the low have the *Atman* within, who never dies and never is born—Him whom the sword cannot pierce, nor the fire burn, nor the air dry, immortal, without beginning or end all pure, Omnipotent and Omnipresent *Atman*!

Swami Vivekananda.

೫

ದಶದಿನದ ಹಬ್ಬವದು ಬರುತಿಹುದು
ಓ! ಆಗ ಹಣವಿಹುದು;
ಕೂಡಿಟ್ಟು ಅದನೆಲ್ಲ ಪ್ರೇಮದಲಿ,
ಈಯುವೆನು ಶಾಲಿಗಾಗಿ!
ಹತ್ತು ಸಾವಿರ ವರಹವಾಗಿರಲಿ,
ಈಯುವೆನು ಶಾಲಿಗಾಗಿ!
ಎನ್ನೆದೆಯ ತನಿವಳ್ಳಿ—ಎನಗವಳು—
ಬಲು ಮುದ್ದೆನ್ನ ಶಾಲಿ!

೬

ಬಡತನವು ಬಂದಿರಿಲಿ ಅದ ಸಹಿಪೆ
ನನ್ನ ಪ್ರಿಯೆ ನನಗೆ ಬೇಕು.
ನೋಡು ಕಾಡುವರೆಮ್ಮನು!
ಅವಳಿಗಲ್ಲದೊಡೆಲ್ಲಿರದೆ ಹೋಗಿ,
ಆಳಾಗಿ ಬೀಸುವೆನು ರಾಗಿ!
ಈ ಏಳು ವರುಷಗಳು ಕಳೆಯುತಲೆ,
ಎನ್ನ ವರಿಸುವಳು ಶಾಲಿ!
ಆಗೊಲಿಸಿ ನಲಿಯುವೆನು ಆದರೆಯು,
ಒಲ್ಲೆ ನೆಮ್ಮೀ ಶ್ರೇಣಿಯಲಿ!

ನೀಲ—ಬೆಂಗಳೂರು.

ಗುಂಡು ಸೂಜಿ ನುಂಗಿದರೇನಾಗುತ್ತದೆ?

ನಮ್ಮ ಹೊಟ್ಟೆಯೊಳಗಿನ ಕರುಳುಗಳು ಬಹಳ ಉದ್ದವಿದ್ದು, ಬಾವಿಯ ಹಗ್ಗದಂತೆ ಸುತ್ತಿಕೊಂಡಿವೆ. ಗುಂಡು ಸೂಜಿಯನ್ನು ನುಂಗಿದರೆ ಅದರ ಚೂಪಾದ ಮೊನೆಯು ಅಂಕು ಡೊಂಕಾದ ಕರುಳುಗಳ ಸಂದಿನಲ್ಲಿ ಸಿಕ್ಕಿಕೊಂಡು ಕರುಳಿನಲ್ಲಿ ತೂತನ್ನುಂಟುಮಾಡುತ್ತದೆ.

ನಾವು ಮುದಕರಾಗುವುದು ಹೇಗೆ?

ಮನುಷ್ಯ ಶರೀರದಲ್ಲಿ ತುಂಬಾ ವಿಷ ಭರಿತ ವಸ್ತುವಿದೆ. ಕೆಲವು ಅವನು ಹುಟ್ಟುವಾಗಲೇ ಇರುತ್ತವೆ. ಕೆಲವು ಅವನ ಅಭ್ಯಾಸದಿಂದ ಒಳಸೇರುತ್ತವೆ. ಅವುಗಳು ಕ್ರಮೇಣ ನರಗಳನ್ನೂ ದೇಹವನ್ನೂ ಕ್ಷಯಿಸುತ್ತವೆ. ಇದರಿಂದಾಗಿ ನಿಶ್ಶಕ್ತಿಯುಂಟಾಗಿ ನಾವು ಮುದುಕರಾಗುತ್ತೇವೆ.

ವರ್ಷಾರಂಭದಲ್ಲಿ ಚಂದಾದಾರರಾದ ಊರೊಳಗಿನವರೆಲ್ಲರ ಚಂದಾ ಹಣವು ಮುಗಿದಿರುತ್ತದೆ. ಅವರೆಲ್ಲರೂ ದ್ವಿತೀಯ ವರ್ಷದಲ್ಲೂ ನಮ್ಮನ್ನು ಪ್ರೋತ್ಸಾಹಿಸುವರಾಗಿ ನಂಬುವೆವು. ಮೆನೆಜರ್.

ಬ. ಬ.

ಪರಮಹಂಸರ ಅಮೃತವಾಣಿ.

ಆಗನಾಚಾರಗಳೆಂದು ಶೌಚ ವಿಧಿಗಳ ಮೇಲೆಯೆ ಗಾಢವಾಗಿ ಲಕ್ಷ್ಯವನ್ನಿಡುವುದರಿಂದ, ಅದೇ ಒಂದು ಮಹಾ ರೋಗದಂತೆ ಬಾಧಿಸುವುದು. ಇಂತಹ ರೋಗಾಕ್ರಾಂತರಾದವರಿಗೆ ದೇವರ ಹಾಗೂ ಮನುಷ್ಯರ ವಿಷಯವಾದ ಚಿಂತನೆಗೆ ಅವಕಾಶವು ಎಂದೂ ಸಿಗಲಾರದು.

* * *

ತಾಯಿ ಆಮೆಯು ನೀರಲ್ಲಿ ಆಹಾರವನ್ನು ಹುಡುಕುತ್ತ ಸಂಚರಿಸುವುದು; ಆಗ, ಅದರ ಮನಸ್ಸು ಎತ್ತ ವಿಹರಿಸಿದೆ ಎಂದು ಭಾವಿಸುವಿ? ಅದು, ವಾಸ್ತವವಾಗಿಯೂ, ಅದೇ ಹೊಳೇ ದಂಡೆಯ ಮೇಲಿಟ್ಟ ತನ್ನ ಮೊಟ್ಟೆಗಳ ಕಡೆಗೇ ಹರಿದಿದೆ. ಇದರಂತೆಯೆ, ಸಂಸಾರಕ್ಕೆ ಸಂಬಂಧಿಸಿರುವ ನಿನ್ನ ಕರ್ಮವನ್ನು ಮಾಡುತ್ತಲಿರುವಾಗಲೂ, ನಿನ್ನ ಮನಸ್ಸು ಭಗವಂತನ ಪವಿತ್ರ ಪಾದ ಪದ್ಮದಲ್ಲಿಯೇ ಯಾವಾಗಲು ಸ್ಥಿರವಾಗಿರುವಂತೆ ಜಾಗರೂಕನಾಗಿರು!

* * *


ಸತ್ಯವಾಗಿಯೂ ಹೇಳುತ್ತೇನೆ: ನೀನು ಗೃಹಸ್ಥಾಶ್ರಮವನ್ನು ವಹಿಸಿದ್ದರೂ, ಪ್ರಾಪಂಚಿಕನಾಗಿದ್ದರೂ ಏನಾಯಿತು? ನಿನ್ನ ಮನಸ್ಸು ಮಾತ್ರ ಭಗವಂತನಲ್ಲೇ ನೆಟ್ಟಿರಲಿ. ಒಂದು ಕೈಯಿಂದ ನಿನ್ನ ಕರ್ಮಗಳನ್ನು ಮಾಡುವಾಗ, ಮತ್ತೊಂದು ಕೈಯಿಂದ ಭಗವಂತನ ಚರಣಗಳನ್ನು ಸ್ಪರ್ಶಿಸುತ್ತಿರು. ಸಂಸಾರ ಸಂಬಂಧವಾಗಿ ಕರ್ಮಗಳನ್ನೇನೂ ಮಾಡಲಿಕ್ಕಿಲ್ಲದಿರುವಾಗ, ಆತನ ಚರಣಗಳೆರಡನ್ನೂ ನಿನ್ನ ಹೃದಯಕ್ಕೆ ಎರಡೂ ಕೈಗಳಿಂದ ಬಿಗಿದು ಹಿಡಿಯುವವನಾಗು!

* * *

ಲೌಕಿಕನಿಗೆ ಐಹಿಕ ವಿಷಯಗಳಲ್ಲಿಯೂ, ತಾಯಿಗೆ ಮಗುವಿನಲ್ಲಿಯೂ, ಪತಿಪರಾಯಣೆಯಾದ ಸತಿಗೆ ಪತಿಯಲ್ಲಿಯೂ ಇರುವ ಪ್ರೀತಿಯು ಇವು ಮೂರೂ ಒಂದಾದರೆಷ್ಟಾಗುವುದೋ ಅಷ್ಟು ಗಾಢವಾಗಿ ಭಗವಂತನಲ್ಲಿ ನಿನಗಿರಲಿ.

* * *

‘ಜಲ,’ ‘ಪಾಣಿ,’ ‘ವೋಟರ್,’ ‘ವಾರಿ,’ ‘ಎಕ್ವಾ’ ಇತ್ಯಾದಿಯಾಗಿ ಬೇರೆ ಬೇರೆ ಭಾಷೆಗಳಲ್ಲಿ ಒಂದೇ ದ್ರವವನ್ನು ಹೇಗೆ ಕರೆವರೋ, ಹಾಗೆಯೆ ಪರಾತ್ಪರನಾದ ವಸ್ತುವು ಒಬ್ಬನೇ; ಅವನ ಬೇರೆ ಬೇರೆ ಕಲೆಗಳಿಗೆ ಹೆಸರುಗಳು ಬೇರೆಯಾಗಿವೆ. ಒಂದು ಸರೋವರಕ್ಕೆ ನಾಲ್ಕು ‘ಘಾಟ’ಗಳಿರಬಹುದು; ಹಿಂದುಗಳು ಒಂದು ಕಡೆಯ ಮೆಟ್ಟಲುಗಳಿಂದಿಳಿದು ನೀರನ್ನು ಕುಡಿದು, ಅದನ್ನು ‘ಜಲ’ವೆನ್ನುವರು. ಮುಸ್ಲಿಮರು ಮತ್ತೊಂದು ಘಾಟದಿಂದಿಳಿದು ನೀರ್ಕುಡಿದು ಅದು ‘ಪಾಣಿ’ ಎನ್ನುವರು; ಮೂರನೆಯ ಕಡೆಯಿಂದಿಳಿದು ಇಂಗ್ಲಿಷರು ಕುಡಿದು ಅದೇ ನೀರನ್ನು ‘ವೋಟರ್’ ಎನ್ನುವರು. ಅದರಂತೆಯೆ ಭಗವಂತನೊಬ್ಬನೇ; ಅವನ ನಾಮಗಳು ಬೇರೆಯಾಗಿವೆ. ಆತನನ್ನೆ ‘ಕೆಲವರು ‘ಅಲ್ಲಾ’ ಎಂದೂ, ಇತರರು ‘ದೇವರೆ’ಂದು, ‘ಬ್ರಹ್ಮ’ ಎಂದು, ‘ಕಾಳಿ’ ಎಂದು ಕರೆವರು; ಇನ್ನಿ



ರರು ರಾಮ, ಹರಿ, ಜೀಸಸ್, ಬುದ್ಧ ಎಂದೂ ಕರೆವರು.

* * *

ಭಗವಂತನು ಎರಡು ಸಂದರ್ಭಗಳಲ್ಲಿ ತಾನೆ ನಗುವನು. ಸಹೋದರರು ಹಗ್ಗವನ್ನು ಹಿಡಿದುಕೊಂಡು ಅವರಿಗೆ ತಂದೆಯು ಬಿಟ್ಟಿರುವ ಆಸ್ತಿಯನ್ನು ವಿಭಾಗಿಸಿಕೊಳ್ಳುತ್ತಾ, ‘ನನ್ನದಿದು, ಇದು ನನ್ನದು’ ಎನ್ನುವಾಗ, ಭಗವಂತನು, “ವಿಶ್ವವೆಲ್ಲವು ನನ್ನದಾಗಿರುವಾಗ, ಈ ಮೂರ್ಖರು ಆ ಆಸ್ತಿಯು ಅವರದೆನ್ನುವರಲ್ಲ” ಎಂದು ನಗುವನು. ಇನ್ನೊಮ್ಮೆ,—ಮಗುವಿಗೆ ಕಠಿನ ಕಾಹಿಲೆಯಾಗಿದ್ದಾಗ, ವೈದ್ಯನು ಆ ಕಾಹಿಲೆ ಗುಣ ಪಡಿಸುವ ಭಾರವನ್ನೆಲ್ಲ ತಾನೆ ಹೊರುವವನಾಗಿ ಆ ತಾಯಿಗೆ ಸಮಾಧಾನ ಹೇಳುವ ಸಂದರ್ಭದಲ್ಲಿ, — ಭಗವಂತನು, “ಕೊಲ್ಲುವವನು ಭಗವಂತನಾಗಿರುವಾಗ ಕಾಪಾಡುವುದಕ್ಕೆ ಇತರ ಯಾವುದೂ ಸಮರ್ಥವಾಗಿಲ್ಲೆಂದು ಈ ವೈದ್ಯ ಮೂರ್ಖನು ತಿಳಿಯನಲ್ಲ” ಎಂದು ನಗುವನು.

* * *

ಮೂರು ತರಗತಿಯ ಭಕ್ತರುಗಳಿರುವರು. ಅಧಮ ವರ್ಗದವನು ಆಕಾಶದ ಕಡೆಗೆ ಕೈ ತೋರಿಸಿ, ‘ಆತನು ಅಲ್ಲಿರುವನು’ ಎನ್ನುತ್ತಾನೆ. ಮಧ್ಯಮ ವರ್ಗದವನು, ‘ಆತನು ಪ್ರತಿಯೊಂದರ ಹೃದಯದಲ್ಲಿಯೂ ಅಂತರ್ಯಾಮಿಯಾಗಿರುವನು” ಎನ್ನುತ್ತಾನೆ. ಆದರೆ, ಅತ್ಯುತ್ತಮನಾದವನು, ‘ಆತನೇ ಇದೆಲ್ಲವೂ ಆಗಿದ್ದಾನೆ; ನನಗೆ ಕಾಣುವ ಎಲ್ಲ ವಸ್ತುಗಳೂ ಆತನ ನಾನಾ ರೂಪುಗಳಷ್ಟೆ ಆಗಿವೆ’ ಎನ್ನುವನು.

* * *

ಮಾತೆಯೆ, ನಿನ್ನಲ್ಲಿರುವ ಕರುಣೆಯ ಭಿಕ್ಷಾರ್ಥಿಯಾಗಿ, ನಿವೇದಿಸಿಕೊಳ್ಳುವೆನು. ನಿನ್ನ ಮಕ್ಕಳನ್ನು ನಿನ್ನ ಪಾದಪದ್ಮಗಳಿಂದ ದೂರದೂರಕ್ಕೆ ಸೆಳೆವುದಾವುದೋ ಅದರಿಂದ ನನ್ನನ್ನು ಕಾಪಾಡು. ನಾನು ವಿಷಯ ಸಂತೃಪ್ತಿಯನ್ನು ಆಶಿಸಿಲ್ಲ. ನನಗೆ ಕೀರ್ತಿಯೂ ಬೇಡ. ಅಲೌಕಿಕವಾದ ಅದ್ಭುತ ಕಾರ್ಯಗಳನ್ನು ಮಾಡಲೂ ಶಕ್ತಿಯುಂಟಾಗಲೆಂದೂ ನಾನು ಬಯಸಿಲ್ಲ. ನಿನ್ನ ಮೇಲೆ ಅಚ್ಚ ಪ್ರೇಮ. ಆಶೆಗಳನ್ನು ಪ್ರತಿಯಾಗಿ ತೃಪ್ತಿಗೊಳಿಸಬೇಕೆನ್ನದ ಪ್ರೇಮ, ನಿಷ್ಕಲಂಕವಾದ ಪ್ರೇಮ, ಲೌಕಿಕ ವಿಷಯಗಳನ್ನು ಬಯಸದ ಪ್ರೇಮ, ಅಮರ ಪ್ರಾಣವಾದ ಆತ್ಮದ ಆಳದಿಂದ ತಾನಾಗಿ ಒಸರುತ್ತ ಉಕ್ಕಿ ಬರುವ ನಿನ್ನ ಕಡೆಗೆ ಹರಿಯುವ ಪ್ರೇಮ, ಇದನ್ನೆ ನನಗೆ ಕರುಣಿಸು. ಲೌಕಿಕ ವ್ಯವಹಾರದ ಮಾಯೆಯಿಂದ ಮುಗ್ಧಗೊಳ್ಳದೆ ನಿನ್ನ ಮಗುವು, ನಿನ್ನನ್ನು ಮರೆಯಾದಂತೆ ವರ ಪಾಲಿಸು. ಹೆಣ್ಣು ಹೊನ್ನುಗಳೆಂಬುವುಗಳಿಂದ ನೀನು ಹೊಸೆದ ಈ ಸಂಸಾರದ ಬಲೆಯಲ್ಲಿ ಸಿಲ್ಕಿ ನಿನ್ನನ್ನು ಮರೆಯದಂತೆ ಕರುಣಿಸು. ಇವುಗಳಿಂದ ಮೋಸ ಹೋಗದಂತೆ ಅವನನ್ನು ಕಾಪಾಡು. ಈ ಲೋಕದಲ್ಲಿ ನೀನಲ್ಲದೆ ನಿನ್ನ ಮಗುವಿಗೆ ಇನ್ಯಾರೂ ಇಲ್ಲವೆಂಬುದನ್ನು, ತಾಯಿಯಾದ ನೀನು ಮರೆಯುವುದೆ? ನಿನ್ನ ಹೆಸರನ್ನು ಹಾಡುವುದಕ್ಕೂ ನಾನು ತಿಳಿದಿಲ್ಲ. ಗಾಢಭಕ್ತಿಯು ನನ್ನಲ್ಲಿಲ್ಲ. ನಿನ್ನ ಕಡೆಗೆ ನಡೆಸುವ ಜ್ಞಾನವೂ ನನಗಿಲ್ಲ, ನಿನ್ನಲ್ಲಿ ಶುದ್ಧ ಪ್ರೇಮವೂ ನನಗಿಲ್ಲ. ಅಪಾರ ಕರುಣಾಮಯಿಯಾದ ನೀನು ನನಗೆ ಅಂತಹ ಪ್ರೇಮವನ್ನು ಕರುಣಿಸುವಳಾಗು!

ವಿವೇಕಾನಂದ ಸೊಸೈಟಿಯವರ ಸಂಗ್ರಹ.

([illegible]ದಿಂದ ಮುಂದುವರಿಸಿದುದು)

[illegible] ಇಪ್ಪತ್ತೈದು ವರ್ಷ ಪ್ರಾಯದ ಓರ್ವ ತರುಣನು ಹಾರಿ ಬಂದು [illegible] ಯನ್ನು ಹಾಕಿ. ಆಕೆಯ ತಲೆಯನ್ನು ತನ್ನ ತೊಡೆಯ ಮೇಲಿಟ್ಟು [illegible] ಸೆರಗಿನಿಂದ ಗಾಳಿ ಬೀಸಲು ತೊಡಗಿದನು. ರಮೆಯು ಕಣ್ಣು [illegible]! [illegible] ಓರ್ವ ಸುಂದರ ಪುರುಷ! ಆಕೆಗೆ ಏನೂ ತಿಳಿಯಲಿಲ್ಲ. [illegible] ಆಕೆಯ ತಲೆಯನ್ನು ತನ್ನ ತೊಡೆಯಿಂದಿಳಿಸಿ ಆ [illegible] ಕೊಂಡನು. ರಮೆಯು ಮೆಲ್ಲನೆ ಎದ್ದು ಕುಳಿತುಕೊಂಡಳು. [illegible] ಸುಂದರ ಪುರುಷನನ್ನೇ ತುಸು ಕಾಲ ನೋಡಿದಳು. ಎದ್ದು ನಿಂತಳು, [illegible] ಬಿದ್ದಿದ್ದ ಚಿರತೆಯನ್ನೂ ಅದರ ತಲೆಯಲ್ಲಿ ನಾಟಿದ್ದ ಭಲ್ಲೆಯನ್ನೂ [illegible] ಆಕೆಗೆ ಎಲ್ಲವೂ ಹೊಳೆಯಿತು! ತನಗೆ ಜೀವದಾನವನ್ನು ಮಾಡಿದ ಪುರು[illegible]ನೆ ಬೀಳಬೇಕೆಂಬ ಕುತೂಹಲವುಂಟಾಯಿತು! ಆದರೆ, ಲಜ್ಜೆಯೂ ಗೌರ[illegible] ಆ [illegible] ಮಾಡಲು ಬಿಡಲಿಲ್ಲ. ಹಾಗೂ, ಆ ಯೌವನಸ್ಥನನ್ನು ಕುರಿತು [illegible]" ಎಂದು ಕೇಳಿದಳು.

"ನಾನು ಉರುವ ಪಾಳೆಯಕ್ಕೆ ಸೇರಿದವನು. ಜಾತಿಯಲ್ಲಿ ಜೈನನು" ಎಂದು ಆ ಪುರುಷನು ಉತ್ತರವಿತ್ತನು.

"ತಮ್ಮ ಹೆಸರು?"

"ರಾಮಪ್ಪ ಹೆಗ್ಗೆ. ತಿಮ್ಮಪ್ಪ ಹೆಗ್ಗೆಯ ಮಗ!"

"ತಮ್ಮದು?"

"[illegible]"

ರಮೆಯು ಕಣ್ಣೆತ್ತಿ ನೋಡಿದಳು. ನಾಲ್ಕು ಕಣ್ಣುಗಳೂ ಒಟ್ಟಿಗೆ ಸೇರಿದುವು. ಆಕೆಯ ವದನವು ಕೆಂಪಡರಿತು! ತಲೆಯನ್ನು ತಗ್ಗಿಸಿದಳು. ಅಂಗಾಂಗಗಳು [illegible]ರೋಮಾಂಚದಿಂದ ತತ್ತರಿಸ ತೊಡಗಿದುವು. ಕ್ಷಣಕಾಲ ಇಬ್ಬರೂ ಮೌನರಾದರು! [illegible]ಂಚ ತಡೆದು ರಾಮಪ್ಪ ಹೆಗ್ಗಡೆಯು "ನಿಮ್ಮನ್ನು ಅರಮನೆಯ ವರೆಗೆ ಬಿಡಲೇ?" ಎಂದು ಕೇಳಿದನು.

ಅನಕ್ಕನಳು "ನನ್ನೊಡನೆ ಸೇವಕನಿದ್ದಾನೆ" ಎಂದು ಹೇಳಿ ಮಲಗಿರುವ ಶೀನ ಶೆಟ್ಟಿಯನ್ನು ತೋರಿದಳು. ಅವನು ಇನ್ನೂ ಎಚ್ಚತ್ತಿರಲಿಲ್ಲ. ರಾಮಪ್ಪನು ಅವನನ್ನು ಎಬ್ಬಿಸಿದನು. ಮೂವರೂ ಕಡ್ರೆಯ ಅರಮನೆಯ ಕಡೆಗೆ ಸಾಗಿದರು. ಶೀನ ಶೆಟ್ಟಿಯು ಅಮ್ಮಾ, "ನಾನು ನಿದ್ರೆಯಲ್ಲಿ ಏನೆಲ್ಲೊ ಕನ್ಸು ಕಂಡೆ" ಎಂದು ಹೇಳು[illegible]. ಆದರೆ ರಮೆಯು ಅವನ ಮಾತಿಗೆ ಕಿವಿ ಕೊಡುತ್ತಿರಲಿಲ್ಲ. ಆಕೆಯು ಆ ಸುಂದರ ಪುರುಷನು ತನಗೆ "ನೀವು" ಎಂದು ಹೇಳಿದುದನ್ನೇ ನೆನಸಿ ದುಃಖಪಡುವವ[illegible]. ಅರಮನೆಯ ಬಾಗಿಲಿಗೆ ತಲಪಿದೊಡನೆ ರಮೆಯು ರಾಮಪ್ಪ ಹೆಗ್ಗಡೆಯನ್ನು ಕುರಿತು "ಅರಮನೆಯೊಳಕ್ಕೆ ಹೋಗೋಣ" ಎಂದಳು. "ಮತ್ತೊಂದು ದಿನ ಬರು[illegible]" ಎಂದು ಹೇಳಿ ರಾಮಪ್ಪ ಹೆಗ್ಗಡೆಯು ಉರುವಕ್ಕೆ ನಡೆದನು.

[illegible]ಪ್ಪ ಹೆಗ್ಗಡೆಯು ಬೇಟೆಯಲ್ಲಿ ಬಹಳ ಗಟ್ಟಿಗನು. ಕಡ್ರೆಯ ಹತ್ತಿರದ ಕಾಡಿ[illegible] ಚಿರತೆಗಳ ಕಾಟವಿದೆಯೆಂದು ತಿಳಿದೇ ಅವನು ಆ ಕಾಡಿಗೆ ಎಳೆಂಟು ದಿನ [illegible] ಹೋಗಿದ್ದನು. ಮೇಲೆ ವಿವರಿಸಿದ ದಿನ ಒಂದು ಚಿರತೆಯನ್ನು ಕಂಡನು. [illegible] ಕೊಂದನು.

[illegible] ರಾಮಪ್ಪ ಹೆಗ್ಗಡೆಯನ್ನಲ್ಲದೆ ಇತರ ಯಾರನ್ನೂ ಮದುವೆ [illegible]ವುದಿಲ್ಲವೆಂದು ಹಟ ಹಿಡಿದಳು. ಆದರೆ, ಆಕೆಯ ತಂದೆಯು ಇದಕ್ಕೆ ಒಮ್ಮೆಗೆ [illegible]. ಅವನಿಗೆ ತನ್ನ ಪುತ್ರಿಯನ್ನು ಉಳ್ಳಾಲ ರಾಜಪುತ್ರನಿಗೆ ಕೊಟ್ಟು ವಿವಾಹ [illegible] ಇಷ್ಟವಿದ್ದಿತು. ರಾಣಿಯು "ನನ್ನ ಮುದ್ದುಮಗಳ ಜೀವವನ್ನು [illegible], ಅವಳನ್ನು ಕೊಟ್ಟು ಮದುವೆ ಮಾಡಬೇಕೆ"ಂದು ಹಟ ಹಿಡಿದಳು. ಶೀನ [illegible] "ಅವ್ವು ಬದ್ಕಿದಿಲ್ಲಿ ಆಕಿಬ್ಬ ನನ್ನ ಕೊಲ್ತಿತ್ತು. ನಮ್ಗೊನ್ನ ಉಳ್ಸಿದ ಆ [illegible]ಗೇ ರಮೆಯನ್ನು ಕೊಟ್ಟು ಕಲ್ಯಾಣ ಮಾಡ್ಬೇಕು" ಎಂದು ಇತರ ಸೇವಕ[illegible] ಹೇಳುತ್ತಿದ್ದನು. ಅದಕ್ಕವರು "ಹೌದೌದು" ಎಂದು ಒಪ್ಪಿ[illegible]ರು. ರಾಜನೂ ಒಪ್ಪಬೇಕಾಯಿತು.

ಸ್ವೀಕಾರ ವಿಮರ್ಶೆ.

ರೌಂಡ್ ಟೇಬಲ್ ಕೊನ್ಫರೆನ್ಸಿಗೆ ತೆರಳುವುದಕ್ಕಾಗಿ ಮಹಾತ್ಮಾ ಗಾಂಧಿಯವರು 'ಪಿಲ್ಸನಾ' ಸ್ಟೀಮರು ಹತ್ತಲಿರುವಾಗ ಭಾರತಮಾತೆಯು ಅವರನ್ನು ಹರಸುವ ಸುಂದರವಾದ ಕೆಲೆಂಡರ್ ಒಂದು ಷಹಾ ಕಂಪೆನಿಯವರಿಂದ ನಮಗೆ ತಲಪಿದೆ.

'ಸಮರ್ಪಣೆ'—ಲೇಖಕರು ಶ್ರೀ. ಕಟೀಲ್ ಗಣಪತಿ ಶರ್ಮಾ, ವಿದ್ಯಾರ್ಥಿ ಗಣಪತಿ ಹೈಸ್ಕೂಲು ಮಂಗಳೂರು. ಬೆಲೆ ೧ ಆಣೆ ೬ ಪೈ. ಕೆಲವು ವರ್ಷಗಳಿಂದ ವಿದ್ಯಾರ್ಥಿಗಳನ್ನು ಕಥೆ ಕವಿತೆ ಮೊದಲಾದ ಬರೆಹಗಳ ಮಾರ್ಗವಾಗಿ ಪ್ರೋತ್ಸಾಹಿಸುವ ಶಾಲೆಯೆಂದರೆ ಗಣಪತಿ ಹೈಸ್ಕೂಲ್. ಅಂತಹ ಪ್ರೋತ್ಸಾಹನದ ಮೂಲ ಪುರುಷರು ಕನ್ನಡ ಉಪಾಧ್ಯಾಯರಾದ ರಾ। ಪಿ. ಅನಂತ ಪದ್ಮನಾಭಯ್ಯನವರು. ಇವರ ಶಿಷ್ಯರಾಗಿದ್ದ ಕೆಲವು ವಿದ್ಯಾರ್ಥಿಗಳು ಎಷ್ಟೋ ಕವಿತೆ, ಕಥೆ ಮೊದಲಾದುವುಗಳನ್ನು ವಿದ್ಯಾರ್ಥಿ ದಶೆಯಲ್ಲೇ ಬರೆಯುತ್ತಿದ್ದರು. ಶ್ರೀ. ಶರ್ಮರವರೂ ಪ್ರಕೃತದಲ್ಲಿ ಪದ್ಮನಾಭಯ್ಯನವರ ಶಿಷ್ಯರು; ಆದುದರಿಂದಲೇ ಅವರು ಕನ್ನಡ ವಾಙ್ಮಯದಲ್ಲಿ ಇಷ್ಟೊಂದು ಉತ್ತೇಜಿತರಾಗಿ ಮೇಲಿನ ಮಧುರ ಕಥಾಂಜಲಿಯನ್ನು ನವಚೇತನ ಗ್ರಂಥ ಮಾಲೆಯ ಪ್ರಥಮ ಕುಸುಮವಾಗಿ ಹೊರಡಿಸಿರುವರು. ಯತ್ನ ಶ್ಲಾಘ್ಯ! ವಿದ್ಯಾರ್ಥಿಗಳನ್ನು ಕನ್ನಡಿಗರು ಪ್ರೋತ್ಸಾಹಿಸುವರೇ?

ಬೆಳಗಾಂವಿಯ ತುಂಟರ ತಂಡದ ಒಂದಾಣೆಯ ಮಾಲೆಯ ಪ್ರಕಟಣೆಗಳು: (೧) ಪೋಸ್ಟ್ ಮಾಸ್ಟರ—ರವೀಂದ್ರನಾಥ ಠಾಗೂರರ Post-masterನ ಅನುವಾದ; ಭಾವಪೂರಿತ ಕಥೆ, ಭಾಷೆ ಗಂಭೀರವಿದೆ. (೨) ಸಮಾಜ ಸೇವೆ, ಶ್ರೀ. ಟೇಂಗ್ಸೆ ಗೋವಿಂದರಾಯರು ಲೇಖಕರು. ಕವಿರಾಜ ಜಗನ್ನಾಥ ಪಂಡಿತನ ಸಮಾಜ ಸೇವೆಯು ಸ್ಫೂರ್ತಿಯುತವಾಗಿ ಚಿತ್ರಿಸಲ್ಪಟ್ಟಿದೆ. ಇಂತಹ ಐತಿಹಾಸಿಕ ಕಥೆಗಳ ಪ್ರಕಟಣೆಯಿಂದ ವಾಙ್ಮಯ ಪ್ರಚಾರಕ್ಕೆ ಹೆಚ್ಚು ಪ್ರಯೋಜನವಿದೆ. ಒಂದಾಣೆ ಮಾಲೆಯ ವಾರ್ಷಿಕ ಚಂದಾ ಅಂಚೆವೆಚ್ಚ ಸೇರಿ ರೂ. ೧-೪-೦. ಸರ್ವರೂ ಪ್ರೋತ್ಸಾಹಿಸುವರಾಗಿ ನಂಬುಗೆ.

ಉಡುಪಿಯ ಕಿರಿಯರ ಪ್ರಪಂಚದಿಂದ ಬಂದ 'ನಾಡ ಕಥೆಗಳು' ಎಂಬ ಮನೋಹರ ಪಹಿಯು ಹಸ್ತಗತವಾಗಿದೆ. ಶ್ರೀ. ಕೆ. ಕೆ. ಶೆಟ್ಟರ 'ಉಡುಪಿಯ ಮುದುಪಿನ ಕಳವು' ಕಥೆಯ ಶೈಲಿಯೂ, ವಸ್ತುಕವೂ ಮನೋರಂಜಕವಿವೆ. ಕಿರಿಯರ ಪ್ರಪಂಚವನ್ನು ಎಲ್ಲರೂ ಕೈಕೊಟ್ಟು ನಡೆಸುವರೆಂದು ಹಾರೈಕೆ.

ಮೈಸೂರಿನ 'ಕಾದಂಬರಿ ಸಂಗ್ರಹದ ವಿಶೇಷ ಸಂಚಿಕೆ (?) ಯೊಂದು ಹಸ್ತಗತವಾಗಿದೆ. ವಿಮರ್ಶಿಸುವೆವು.

[illegible] ರಾಮಪ್ಪ ಹೆಗ್ಗಡೆಗೂ ವಿವಾಹವಾಯಿತು. ಮದುವೆಯು [illegible] ವಿಜಂಭಣೆಯಿಂದ ಜರಗಿತು. ಕಡ್ರೆ ರಾಜನು ತನ್ನ ಅಳಿಯನನ್ನು ಸೇನಾಪತಿ [illegible]

+ + + +

ಕವಿ ಪ್ರಪಂಚ.

ಕಳೆದ ೧೯೩೨ನೇ ಇಸವಿಯ ಸಪ್ಟಂಬರ ತಿಂಗಳ ಪ್ರೇಮದ ೬ನೇ ಸಂಚಿಕೆಯಲ್ಲಿ ಪಂಡಿತ ತಾರಾನಾಥರು 'ಅಂದಿನ ಚೆಂದ' ಎಂಬ ಕವಿತೆಯಲ್ಲಿ—

ಒಂದು ಕಾಲದಿ ನಮ್ಮ ನಾಡಿದು ದೇವಬೀಡಾಗಿತ್ತಿದು!
ಒಂದು ಕಾಲದಿ ನಮ್ಮ ನಾಡಿದು ಧರ್ಮಧರ್ಮವನೆತ್ತಿದು!
ಋಷಿಗಳಾಗರವಾಗಿದು!
ತತ್ವಭಾಂಡಾರೆನಿಸಿದು!
ಲೋಕಲೋಕದ, ನಾಕನರಕದ ಆದಿ ಅಂತವನರಿತುದು!
ವೇದ ವೇದದ ಘೋರ ಘೋಷವ ಪಾಡಿತೆತ್ತಲು ಕುರಿತುದು!

ಎಂದು ಮುಂತಾಗಿ ಮನೋವೇದನೆಯಿಂದ ನುಡಿದಿದ್ದಾರೆ.

ಕಳೆದ ೧೯೩೨ನೇ ಇಸವಿಯ ನವಂಬರ ತಿಂಗಳ ಜಯಕರ್ನಾಟಕದ ೧೨ನೇ ಸಂಚಿಕೆಯಲ್ಲಿ ಶ್ರೀ. ಮುಕ್ತಾಲಿ ಲಕ್ಷ್ಮಣರಾಯರು 'ಬೇಕು' ಎಂಬ ಕವಿತೆಯಲ್ಲಿ—

ನಾವನು ನಡಿಸಲು
ನಾವಿಬ್ಬರೂ ಬೇಕು
ಒಡೆಯನ ಕೋರಿಕೆ ಕೈಗೂಡಬೇಕು ॥
ಕರೆಬರುವ ವರೆಗಿದ್ದು
ಆ ಮೇಲೆ ನಡೆದೆದ್ದು
ಸಾಗುತ ಸಾಗುತ ಸಾಗಲೇ ಬೇಕು ॥

ಎಂದೆಲ್ಲಾ ಬೇಕಿರುವ ರೀತಿಯಲ್ಲಿ ಹಾಡಿದ್ದಾರೆ.

ಕಳೆದ ೧೯೩೧ನೇ ಇಸವಿಯ ಮಾರ್ಚಿ ಮಾಸದ ರಂಗಭೂಮಿಯ ೬ನೇ ಸಂಚಿಕೆಯಲ್ಲಿ ಶ್ರೀ. ಈಶ್ವರ, ಸಣಕಲ್ಲರಬ ಕವಿ ಇವರು 'ಏನು ಮಾಡಲಿ?' ಎಂಬ ಕವಿತೆಯಲ್ಲಿ—

ಏನು ಮಾಡಲೋ! ಅಣ್ಣ! ಏನು ಮಾಡಲೊ?
ಉಟ್ಟುಕೊಳ್ಳೆ ದೋತ್ರವಿಲ್ಲ!
ತೊಟ್ಟುಕೊಳ್ಳಲಂಗಿಯಿಲ್ಲ!
ಏನು ಮಾಡಲೊ! ಅಣ್ಣ ಏನು ಮಾಡಲೊ!

ಎಂದೆಲ್ಲ ಹೃದಯಂಗಮವಾಗಿ ಬರೆದಿರುವರು.

ಕಳೆದ ೧೯೩೨ನೇ ಇಸವಿ ಜೂನ್ ತಿಂಗಳ ಸುಬೋಧದ ೮ನೇ ಸಂಚಿಕೆಯಲ್ಲಿ ಶ್ರೀಮತಿ "ಜೈನ ಮಹಿಳೆ" ಎಂಬವರು "ಮಾತೆಯ ಮರುಕ" ಎಂಬ ಕವಿತೆಯಲ್ಲಿ—

ಚಿನ್ನದಾ ಗಣಿಯಾದ ಬಾರತ
ಪುಣ್ಯ ಭೂಮಿಯು ಇಂದಿಗೆ
ಅನ್ನಿಗರ ದಬ್ಬಾಳಿಕೆಯೊಳೀ
ಬನ್ನ ಬಡತನವಾಂತುದೇ

ಎಂದೂ—

ಮತಿಯುತರೆ ಪರದಾಸ್ಯವೆಂಬುವ
ಸೃಂಖಲೆಯ ಹರಿದೊಗೆಯಿರಿ
ಗತಯುಗದ ವೈಭವವ ಮರಳಿಸಿ
ಭರತ ಭೂಮಿಗೆ ತನ್ನಿರಿ.

ಎಂದೂ ಸಂತಾಪೋತ್ಸಾಹದಿಂದುಸುರಿರುವರು.

ಕಳೆದ ೧೯೩೨ನೇ ಇಸವಿ ಫೆಬ್ರವರಿ ತಿಂಗಳ 'ಕಲಾ'ದ ೮ನೇ ಸಂಚಿಕೆಯಲ್ಲಿ ಶ್ರೀ. ಉದ್ಯಾವರ ಬಾಲಕೃಷ್ಣ ರಾಯರು 'ಭಿನ್ನಹ' ಎಂಬ ಕವಿತೆಯಲ್ಲಿ ದೇವನನ್ನು ಕುರಿತು—

ಮಣಿಯ ರಾಶಿಯನ್ನು ಧಾರ
ಪೋಣಿಸಿರುವ ತೆರದಿ ಸಕಲ
ಜೀವರಾಶಿಯನ್ನು, ದೇವ, ನಿನ್ನ ಕೊಳಲದು
ದಾರದಂತೆ ಪ್ರೇಮದಿಂದ ಪೋಣಿಸಿರುವುದು.

ಎಂದು ಮುಂತಾಗಿ ಪ್ರೇಮ ಹೃದಯದಿಂದ ಬರೆದಿರುವರು.

ಇದೇ ಬರುವ ಜೂನ್ ತಾ. 4ನೇ ದಿನ ಬೆಳಿಗ್ಗೆ 9½ ಘಂಟೆಗೆ ಕುದ್ರೋಳಿ ಶ್ರೀ ಗೋಕರ್ಣನಾಥ ಕ್ಷೇತ್ರದಲ್ಲಿ "ಬಡವರ ಬಂಧು"ವಿನ ಪ್ರಥಮ ವರ್ಷೋತ್ಸವವು *
ರ ಅಧ್ಯಕ್ಷತೆಯಲ್ಲಿ ಭಜನೆ, ಭಾಷಣ, ಫಲಾಹಾರ, ಭಾವಚಿತ್ರ ಮೊದಲಾದ ಕಾರ್ಯಕ್ರಮಗಳೊಡಗೂಡಿ ಜರಗಲಿರುವುದರಿಂದ, ತಾವು ತಮ್ಮ ಇಷ್ಟಮಿತ್ರರೊಡಗೂಡಿ ಆ ದಿನ ಚಿತ್ತೈಸುವ ಕೃಪೆ ದೋರಬೇಕಾಗಿ ನಮ್ಮ ಸವಿನಯ ವಿನಂತಿ.

ಮಂಗಳೂರು ಜಾರಪ್ಪ—ಸಂಪಾದಕ.
ಬಿ. ನರ್ಸಪ್ಪ—ಉಪಸಂಪಾದಕ.

*ಇಷ್ಟರ ವರೆಗೆ ಅಧ್ಯಕ್ಷರ ಚುನಾವಣೆಯಾಗಿರುವುದಿಲ್ಲ.

ಕಳೆದ ೧೯೩೨ನೇ ಇಸವಿ ದಶಂಬರ ಮಾಸದ ಪ್ರೇಮದ ೭-೯ನೇ ಸಂಚಿಕೆಯಲ್ಲಿ ಕನ್ನಡ ಕಂದ ಇವರು "ಕುರುಡ ದಾರಿಕಾರ" ಎಂಬ ಕವಿತೆಯಲ್ಲಿ—

ಕುರುಡ ನಾನು ದಾರಿಕಾರ
ಹೋಗಬೇಕು ಬಹಳ ದೂರ
ದಾರಿಗೆಟ್ಟು ನಿಂತೆ ಊರ
ದಾರಿಯಾವುದೋ! ಹರನೆ! ತೆರನು
ತಿಳಿಯದೋ!

ಎಂದೂ—

ಮುಳ್ಳುಕಂಟಿ ಸುತ್ತಮುತ್ತ
ಕೊಳಗಲಿಹವು ಅತ್ತ ಇತ್ತ
ತಗ್ಗು ತೆವರು ಮತ್ತೆ ಮತ್ತೆ
ದಾರಿ ಯಾವುದೋ! ಹರನೆ!
ತೆರನು ತಿಳಿಯದೋ!

ಎಂದೂ ಒಳ್ಳೇ ಭಾವಗರ್ಭಿತ ಭಾವನೆಯನ್ನೇ ಹೊರಸೂಸಿದ್ದಾರೆ.

ಕಳೆದ ೧೯೩೨ನೇ ಜೂನ್ ತಿಂಗಳ ಪ್ರೇಮದ ೩ನೇ ಸಂಚಿಕೆಯಲ್ಲಿ ಶ್ರೀ. ಅಜ್ಞಾತ ಇವರು 'ಬಾಲವಿಧವೆ' ಎಂಬ ಕವಿತೆಯಲ್ಲಿ—

ತಾಳ್ಮೆ ತಿರುಳನರಿತ ದೇವಿ
ಒಲ್ಮೆಯರಿವ ಹೂತ ದೇವಿ
ಬಾಳ ಸೊಬಗ ಮರೆತ ದೇವಿ
ಕೀಳು ಬದಿಗೆ ಇಟ್ಟ ದೇವಿ
ಕೀಳನೆಲ್ಲ ಕಳೆವ ದೇವಿ
ಹೇಳಲೇನು ಕರುಣ ಮೂರ್ತಿ
ಮಾಯೆಯೆಲ್ಲ ತೊರೆದ ದೇವಿ
ಪ್ರೀಯವೆಲ್ಲನುಳಿದ ದೇವಿ
ಬಾಲವಿಧವೆ ಬಾಲವಿಧವೆ ದೀನದೇವಿಯೆ

ಎಂದೆಲ್ಲಾ ಹೃದಯ ಸಂತಾಪದಿಂದ ವರ್ಣಿಸಿದ್ದಾರೆ.

ಮೇಲಣ 'ಪ್ರೇಮ'ದ ಸಂಚಿಕೆಯಲ್ಲೇ ಸಾಲಿ ರಾಮಚಂದ್ರರಾಯರು ತನ್ನ ಮಗನ ಸ್ವರ್ಗಸ್ಥನಾದ ದುಃಖದಿಂದ ಬರೆದ 'ತಿಲಾಂಜಲಿ' ಎಂಬ ಕವಿತೆಯಲ್ಲಿ —

ಇದ್ದನೊಬ್ಬನೆ ಮಗನು
ಹದ್ದಿನಂದದೆ ಸಾವು
ಸದ್ದು ಮಾಡದೆ ಬಂದು
ಕದ್ದೊಯ್ಯುದ್ದಾತನನು.
ಅಂದಿನಾ ಮಸಣದುರಿ
ಅಂದುವೇ ನಂದಿದುದು
ಅಂದಿನಾ ಹೃದಯದುರಿ
ಎಂದಿಗೂ ಉರಿವುದೈ,

ಎಂದೆಲ್ಲಾ ಬೆಂದೊಡಲಿನಿಂದ ಬಿಸಿಸುಯ್ಯುತ್ತಿರುವರು.

ಕಳೆದ ಸಲದ ಒಗಟಿಗೆ ಸಮರ್ಪಕವಾಗಿ ಉತ್ತರವಿತ್ತ ಮಹನೀಯರ ಹೆಸರುಗಳು

ಶ್ರೀಗಳಾದ ×೧ ಬಿ. ದೇಪಪ್ಪ ಶೆಟ್ಟಿ, ಮುಂಬಾಯಿ; ೨. ಎಂ. ಗೋವಿಂದ ಶೆಣೈ, ಸಿಕಂದರಾಬಾದ್; ×೩. ಟಿ. ಶ್ರೀನಿವಾಸ ಮೂರ್ತಿ, ಬೆಂಗಳೂರು; ×೪. ಬಿ. ಸೋನಪ್ಪ ಕೋಟ್ಯಾನ್, ಮುಂಬಾಯಿ; ×೫. ಲೋಕಯ್ಯ ಬಿ. ಸಾಲಿಯಾನ್ ಮುಂಬಾಯಿ; ೬. ಎನ್. ಕೆ. ಕೇಳ್ಕರ್, ಶಿವಮೊಗ್ಗ; ×೭. ಕೆ. ರಾಮರಾವ್, ಮುಂಬಾಯಿ; ×೮. ಜಿ. ದಾಸಪ್ಪ, ಮೈಸೂರು; ×೯. ಎಂ ಎಂ. ಸುವರ್ಣ, ಮುಂಬಾಯಿ; ×೧೦. ಪಿ. ಶಿವರಾಮ ಹೆಗ್ಡೆ, ಪಡುಬಿದ್ರಿ; ೧೧. ಕೆ. ಟಿ. ಚೆನ್ನಪ್ಪ, ಚಿಕ್ಕಮಗಳೂರು; ೧೨. ಸಿ. ಎನ್. ಶೇಷಪ್ಪ, ಮಂಡ್ಯ; ×೧೩. ಎಂ. ಬಿ. ಶೆಟ್ಟಿ, ಮುಂಬಾಯಿ; ×೧೪. ಸಿ. ಬಿ. ಕೋಟೆಕಾರ್, ಮುಂಬಾಯಿ; ×೧೫. ಶೇಷಪ್ಪ ಜಿ. ಸಿರಿಯಾನ್, ಮುಂಬಾಯಿ; ×೧೬. ಎಲ್. ಎಸ್. ಉಡುಪಿಕರ, ಚಿಕ್ಕಮಗಳೂರು; ×೧೭. ಎ. ಜಿ. ಕೆ. ಹೆಗ್ಡೆ, ಫರಂಗಿಪೇಟೆ; ೧೮. ಪಂ। ಜಿ. ಶಿಶುಪಾಲ ಪಾರ್ಶ್ವನಾಥ ಶಾಸ್ತ್ರಿ ವ್ಯಾಖ್ಯಾನ, ವಿಚಕ್ಷಣ ಮೂಡಬಿದ್ರಿ; ೧೯. ಹೂವಯ್ಯ ಎಂ. ಕುಂದರ್, ಮುಂಬಾಯಿ; ೨೦. ಚಂದು ಜಿ. ಸಾಲಿಯಾನ್, ಮುಂಬಾಯಿ; ×೨೧. ಶ್ರೀಮತಿ, ಸಿ. ವಿ. ಸೀತಲಕ್ಷ್ಮಿ, ಮಡಿಕೇರಿ; ×೨೨. ಶ್ರೀಮತಿ ಕೆ. ಎಸ್. ಲೀಲಾವತಿ, ಕ್ಲೋಸ್‌ಪೇಟ್; ×೨೩. ವಿಠೋಬ ಎಂ. ಕೋಟೆಕಾರ್, ಮುಂಬಾಯಿ; ×೨೪. ಶ್ರೀಮತಿ ಸುಶೀಲ ಎ. ರಾವ್, ಮುಂಬಾಯಿ; ×೨೫. ಕೆ. ಟಿ. ಕರ್ಕೇರ, ಮುಂಬಾಯಿ; ×೨೬. ಶ್ರೀಮತಿ ರುಕ್ಮಬಾಯಿ, ಮುಂಬಾಯಿ; ೨೭. ಶ್ರೀಮತಿ ಟಿ. ತಾರಾಬಾಯಿ, ಪುತ್ತೂರು ೨೮. ಕೆ. ವಿ. ಕುಡ್ವ, ಮುಂಬಾಯಿ; ೨೯. ಬಿ. ಅನ್ನು, ಮೂಲ್ಕಿ; ×೩೦. ಪಿ. ವಾಮನ ವಾಸುದೇವ ನಾಯಕ್, ಪಾಣೆಮಂಗಳೂರು; ×೩೧ ಎಂ. ಈಶ್ವರ ಫೋಟೋಗ್ರಾಫರ್, ಮುಂಬಾಯಿ; ೩೨. ಬಿ. ಶಂಭು ಕೊಟ್ಯಾನ್, ಮುಂಬಾಯಿ; ×೩೩. ಜಿ. ಆರ್. ಪೆರ್ಮುದೆ, ಸುರತ್ಕಲ್; ×೩೪. ಐ. ಬಾಬು, ಸುರತ್ಕಲ್; ×೩೫. ಕೆ. ಸಂಜೀವ ಕಾಮತ್, ಮುಂಬಾಯಿ; ×೩೬. ಮಧ್ವರಾಜ ಮಹಿಷಿ, ಬೆಳಗಾಂವಿ; ×೩೭. ಉ. ಬಿ. ಪ್ರಭಾಕರರಾವ್, ಉಡುಪಿ; ×೩೮. ಪಿ. ಸಿ. ಶೆಟ್ಟಿ, ಜೈನ್ ಪಾಣೆ ಮಂಗಳೂರು; ×೩೯. ಎಂ. ಡಿ. ಜಯಮ್ಮ, ಬೆಂಗಳೂರು; ×೪೦. ಎಸ್. ಎಸ್ ರೈ, ಪುತ್ತೂರು; ×೪೧. ವೈ. ರಾಮಕೃಷ್ಣ ರೈ, ಪುತ್ತೂರು; ×೪೨. ಪಿ. ವಿ. ನಾಗರಾಜ ಶೆಟ್ಟಿ, ಹೊಳೆ ನರಸೀಪುರ; ೪೩. ಸುಬ್ಬ ಕೆ. ಕೋಟ್ಯಾನ್‌ಕಾರ್. ಮುಂಬಾಯಿ; ×೪೪. ಪಿ. ಎನ್. ನಂಜಪ್ಪ, ಬೆಂಗಳೂರು; ೪೫.ಎಂ. ಆರ್. ಎಸ್ ನಾರಾಯಣ ರಾವ್ ಚಿಕ್ಕನಹಳ್ಳಿ; ×೪೬. ಕಾಂಪರ, ಬಿ. ಅಮೀನ್, ಮುಂಬಾಯಿ; ×೪೭. ಆರ್. ಗುರುರಾಜ ಭಟ್, ಬಂಟ್ವಾಳ; ×೪೮. ಪಿ. ನರಸಿಂಹ ಕಿಣಿ, ಕಾರ್ಕಳ, ೪೯. ಕೆ. ಎಸ್. ಕೋಟ್ಯಾನ್, ಮುಂಬಾಯಿ. ೫೦. ಶೇಷಪ್ಪ, ಟಿ. ಸಾಲಿಯಾನ್, ಮುಂಬಾಯಿ; ೫೧. ರಾಮಣ್ಣ ಶೆಟ್ಟಿ, ಮುಂಬಾಯಿ; ೫೨. ಎಸ್. ನರಸಿಂಹ ಮೂರ್ತಿ, ಶಿವಮೊಗ್ಗ; ೫೩. ಎಸ್. ಶಾಷ ಶೆಟ್ಟಿ, ಮುಂಬಾಯಿ; ೫೪. ಕುತ್ಯಾರ್ ಕುಡ್ಡು ಶೆಟ್ಟಿ, ಮುಂಬಾಯಿ; ೫೫. ಸೇರಡೂ ಯೆಲ್ಲಪ್ಪ ಶೆಟ್ಟಿ, ಮುಂಬಾಯಿ; ೫೬. ಮುದ್ರಾಡಿ ಜನಾರ್ಧನಾಚಾರ್ಯ ...ೋಮಣಿ, ಉಡುಪಿ; ×೫೭. ಜಿ. ಕೆ. ಕರುಣಾಕರ್, ಮುಂಬಾಯಿ; ೫೮. ಎಸ್. ಸಣ್ಣಯ್ಯ, ಸಂಪಾಜೆ; ೫೯. ಕೆ. ಯು. ಅಮೀನ್, ಮುಂಬಾಯಿ; ೬೦. ಸಿ. ವಿಟ್ಠಲ್ ಕಾಮತ್, ಕಾಸರಗೋಡು; ×೬೧. ಯು. ಪೂವಪ್ಪ ವೈದ್ಯ, ಉಳ್ಳಾಲ; ೬೨. ಬಿ. ಡಿ. ಪುತ್ರನ್ ಹೈದರಾಬಾದ; ೬೩. ಎಂ. ಪಾಂಡುರಂಗ ಶೆಣೈ, ಕಾಸರಗೋಡು; ೬೪. ಕೆ. ರಾಮ ಶೆಣೈ, ವಿಟ್ಠಲ್; ೬೫. ಆರ್. ಎಸ್. ಗೋಪಾಲಕೃಷ್ಣಯ್ಯ, ಮೂಡಿಗೆರೆ, ೬೬. ಬಿ. ವೆಂಕಟರಾವ್, ವಿದ್ಯಾರ್ಥಿ, ಕಾಸರಗೋಡು; ೬೭. ಶ್ರೀಮತಿ ನಾಗಮ್ಮ ಬಾಯಿ, ಮುಂಬಾಯಿ; ೬೮. ಶ್ರೀಮತಿ ಮೂಲ್ಕಿ ಹೊನ್ನುಬಾಯಿ, ಮುಂಬಾಯಿ; ×೬೯. ಸುರತ್ಕಲ್, ವೆಂಕ. ಪಿ. ಕರ್ಕೇರ ಮುಂಬಾಯಿ; ೭೦. ಸುರತ್ಕಲ್ ತಿಮ್ಮಪ್ಪ ಕೋಟಿಯನ್, ಮುಂಬಾಯಿ; ೭೧. ಕಾಪು ಚರ್ದಪ್ಪ. ಯಂ. ಶೆಣೈ, ಮುಂಬಾಯಿ; ೭೨. ಕಾಪು ಸರ್ವೋತ್ತಮ ಶೆಣೈ, ಮುಂಬಾಯಿ; ೭೩ ಕಾಪು ಗೋಪಾಲ ಶೆಣೈ, ಮುಂಬಾಯಿ; ×೭೪. ಮಂಗಳೂರು ಕೃಷ್ಣಪ್ಪ ಪಾಲ್, ಮುಂಬಾಯಿ; ೭೫. ಹೆಜ್ಮಾಡಿ ಕೃಷ್ಣಪ್ಪ ಎಸ್. ಬಂಗೇರ, ಮುಂಬಾಯಿ, ೭೬. ಕೃಷ್ಣಕಮ್ಮಿ, ಮುಂಬಾಯಿ; ೭೭. ಬಿ. ಎಸ್. ಸುಂದರರಾವ್, ಮಾಗಡಿ; ×೭೮. ಆರ್. ಶರಲಾಯ, ಮಡಿಕೇರಿ; ೭೯ ಎಂ. ಐತಪ್ಪ ನಾವುಂಡ; ×೮೦ ಯು. ಬಿ. ಗೋಪಾಲಕೃಷ್ಣಯ್ಯ, ನಾವುಂಡ; ೮೧. ಬಿ. ದೇವಪ್ಪ ಕುಂಡಲಾಯ, ನಾವುಂಡ; ೮೨. ಶ್ರೀಮತಿ ಸಿ. ಎಚ್. ಎಸ್. ಇಂದಿರಮ್ಮ, ಶಿವಮೊಗ್ಗ; ೮೩. ಬಡಿಲ ದೇವಪ್ಪಶೆಟ್ಟಿ, ಪ್ರೆಸಿಡೆಂಟ್ ಅಡ್ಯಾರ್:

ಮಂಗಳೂರಿನ ಬಿಚ್ಚುಗರು.

ಶ್ರೀಗಳಾದ ×೮೪. ಬಿ. ಬಾಬು ರಾವ್, ವಿದ್ಯಾರ್ಥಿ, ಗವರ್ನಮೆಂಟ್ ಕೊಲೆಜ್ ೮೫. ಕೆ. ಹರಿರಾಮ ಶೆಣೈ; ×೮೬. ಎ. ರಾಮರಾವ್; ೮೭. ಕೆ. ವಿಟ್ಠಲ ಭಕ್ತ; ×೮೮. ಎ. ಪರಮೇಶ್ವರ ನಾಯ್ಕ; ×೮೯. ಕೆ. ರಾಮದಾಸ್ ಕಾಮತ್: ೯೦. ಮುಲ್ಕಿ ಕಾತಾರ ಗಣೇಶರಾಮ ಕಾಮತ್; ೯೧. ಬಂಗ್ಲೆ ಸುಬ್ಬಣ್ಣಾಚಾರ್ಯ; ೯೨. ಕೆ. ನಾರಾಯಣ ಶೆಟ್ಟಿ; ×೯೩. ಶ್ರೀಮತಿ ಕೆ. ಸುವಾಸಿನಿ ದೇವಿ, ಗವರ್ನಮೆಂಟ್ ಟ್ರೈನಿಂಗ್ ಸ್ಕೂಲ್ ಫೊರ್ ವಿಮೆನ್; ×೯೪. ಎಂ. ಅಚ್ಯುತ; ×೯೫. ಬಿ. ದಾಮೋದರ; ×೯೬. ಸಿ. ರಾಮಕೃಷ್ಣಯ್ಯ; ೯೭. ಕೆ. ಉಪೇಂದ್ರ ಪ್ರಭು; ×೯೮. ಎ. ವೇಣುಗೋಪಾಲ ಪಂಡಿತ; ೯೯. ಸುಬ್ಬರಾವ್ ಟೀಚರ್, ಕಂಕನಾಡಿ; ×೧೦೦. ಕೆ. ಈಶ್ವರ ಟೀಚರ್, ಕಂಕನಾಡಿ; ೧೦೧. ಕೊರಗಪ್ಪ ಕುಚ್ಚಿಕಾಡು ಬೋಳೂರು; ×೧೦೨. ಬಿ. ಜನಾರ್ಧನ ನ್ಯಾಕ, ಬೋಳಾರ; ೧೦೩. ವೈ. ವೆಂಕಟ್ರಾಯ ನ್ಯಾಕ, ಸೂರ್ಯಪ್ರಕಾಶ; ×೧೦೪. ಉಮೇಶ ಯಂ. ವಿದ್ಯಾರ್ಥಿ. ೧೦೫. ಶ್ರೀಮತಿ ರಾಧಬಾಯಿ, ಚುಡ್ವೆಗಲ್ಲಿ.

ಸೋಡ್ತಿ ಎತ್ತಲಾಗಿ ರಜತ ಪದಕವು ಶ್ರೀ. ಬಿ. ನಾರಾಯಣ ರಾವ್, ಸನ್ ಒಫ್ ಬಿ. ವೆಂಕಟಗಿರಿರಾವ್, ಚಿಕ್ಕಪೇಟೆ ಬೆಂಗಳೂರು ನಗರ ಇವರಿಗೂ, ದ್ವಿತೀಯ ಬಹುಮಾನವು, ಶ್ರೀ. ಕೆ. ಬಾಬು, ಟೈಲರ್, ಮಂಗಳೂರು ಇವರಿಗೂ ದೊರೆತಿವೆ. ಕೆಲವರು ತಮ್ಮ ಸಂಪೂರ್ಣ ವಿಳಾಸವನ್ನು ಕೊಟ್ಟಿರುವುದಿಲ್ಲ. ಮುಂಬಾಯಿ ಕನ್ನಡಿಗರು ಕನ್ನಡದಲ್ಲಿ ಹೆಚ್ಚಿನ ಅಭಿಮಾನವನ್ನೂ ಅಭಿರುಚಿಯನ್ನೂ ತೋರಿಸುತ್ತಿರುವುದರಿಂದ ಅಲ್ಲಿಯವರೊಳಗೆ ಒಂದು ಸ್ಪೆಶಲ್ ಸೋಡ್ತಿಯನ್ನೆತ್ತಿ 'ಬಡವರ ಬಂಧು'ವನ್ನು ಒಂದು ವರ್ಷದ ತನಕ ಧರ್ಮಾರ್ಥವಾಗಿ ಕಳುಹಿಸಬೇಕೆಂದು 'ಬಡವರ ಕೂಟ'ದ ಸದಸ್ಯರು ನಿರ್ಧರಿಸಿದಂತೆ ಒಂದು ಪ್ರತ್ಯೇಕ ಸೋಡ್ತಿ ಎತ್ತಲಾಗಿ, ನಂಬ್ರ ೨೮ನೇ ಕೆ. ವಿ. ಕುಡ್ವ ಇವರಿಗೆ ಇದು ದೊರೆತಿದೆ. × ಈ ಗುರುತು ಇದ್ದವರು ತಮ್ಮ ಉತ್ತರಗಳನ್ನು ಅತ್ಯಂತ ಮನೋಹರವಾಗಿ ಚಿತ್ರಿಸಿ ಜೀವನದ ಪ್ರತಿಯೊಂದು ಕಾರ್ಯಕಲಾಪಗಳಲ್ಲಿ ಜಾಗ್ರತೆ, ಸೌಂದರ್ಯ, ಸಾಧನೆ, ಶ್ರದ್ಧೆ, ಕಲಾಶಕ್ತಿಗಳಿರುವವರೆಂಬುದನ್ನು ವ್ಯಕ್ತಗೊಳಿಸಿರುತ್ತಾರೆ. ಇಂತಹವರೇ ಜೀವನದಲ್ಲಿ ಯಶಸ್ವಿಗಳಾಗುವರು. ವಿದ್ಯಾರ್ಥಿಗಳ ಪ್ರೋತ್ಸಾಹವು ಸಾಕಾಗಿರುವುದಿಲ್ಲ. ಮಹಿಳೆಯರು ಇನ್ನೂ ಮುಂದಡಿಯಿಡಬೇಕಾಗಿದೆ. ಕೆಲವರು ನಮ್ಮ ಪ್ರತಿ ಒಗಟನ್ನೂ ಬಿಚ್ಚಿ ಪ್ರೋತ್ಸಾಹಿಸುತ್ತಿರುವರು. ಅವರಿಗೂ ಮುಂದಕ್ಕೆ ಬಹುಮಾನಗಳನ್ನು ಕೊಡಬೇಕೆಂದು ಆಲೋಚನೆಯಾಗಿದೆ. ನಮ್ಮ ಒಗಟುಗಳ ಕೆಲ ಬಿಚ್ಚುಗರು ನಮ್ಮ ಚಂದಾದಾರರಾಗಿರುವುದಿಲ್ಲ. ಅವರು ಇನ್ನಾದರೂ ಚಂದಾದಾರರಾಗಿ ಸೇರಿ ನಮ್ಮ ಬೆಂಬಲವಾಗಿ ನಿಲ್ಲುವರೇ? ನಂಬ್ರ ೧೦,೬೦,೬೩ರವರ ಉತ್ತರಗಳು ಅಂದದಲ್ಲಿ ಸರ್ವೋತ್ಕೃಷ್ಟವಿವೆ.

ವಸ್ತ್ರಕ್ಕೆ ಬೆಂಕಿ ತಗಲಿದರೆ ಏನು ಮಾಡಬೇಕು?

ಹೆಂಗಸರಾಗಲೀ ಗಂಡಸರಾಗಲೀ, ತಮ್ಮ ವಸ್ತ್ರಕ್ಕೆ ಬೆಂಕಿ ತಗಲಿತೆಂದು ತಿಳಿದು ಬಂದೊಡನೆ ಗಾಬರಿಗೊಳ್ಳಬಾರದು. ಧೈರ್ಯದಿಂದ ಥಕ್ಕನೆ ಕುಳಿತು ಬೆಂಕಿ ಹಿಡಿದ ವಸ್ತ್ರದ ಭಾಗವನ್ನು ನೆಲಕ್ಕೆ ಒರಸಬೇಕು. ಅಥವಾ ನೆಲದ ಮೇಲೆ ಅತ್ತಇತ್ತ ಹೊರಳಾಡಬೇಕು.

ಮೈಸೂರು ನರ್ಸಣ್ಣನ ಉತ್ತರ.

(ಟಿಟ್-ಬಿಟ್ಸ್) (TIT-BITS)

ಸಂಪಾದಕ ಮಹಾಶಯರೇ,

ಸಿಕ್ಕಿತು! ತಮ್ಮ ಕಳೆದ ಸಲದ 'ಬುದ್ಧಿವಾದ'ದ ಪಟ್ಟಿಯು ಸಿಕ್ಕಿತು! ಟೀಕೆ ಟಿಪ್ಪಣಿಗಳನ್ನು ನಾನು ಕಠಿಣವಾಗಿ ಮಾಡುತ್ತೇನೆಂದು ನೀವೆನ್ನುತ್ತಿರುವಿರಿ. ಇದ್ದುದನ್ನು ಇದ್ದಂತೆ ಹೇಳಿದರೆ ತಪ್ಪೇನು? ಕಂಡದ್ದನ್ನು ಕಂಡಂತೆ ಹೇಳಿದರೆ ಕೋಪವುಂಟೆ? ಮೈದಾನಿನಲ್ಲಿ ಸಭೆಗೂಡಲಾಗಲೀ "ಮಹಾತ್ಮಾ ಗಾಂಧೀಕಿ ಜೈ!" ಎಂದು ಬೊಬ್ಬಿಡಲಾಗಲೀ ಸರಕಾರದ ಓರ್ಡಿನೆನ್ಸ್ ದೆಸೆಯಿಂದ ಸಾಧ್ಯವಿಲ್ಲ. ಈ ಕೆಲವು ಜನರ ಓರ್ಡಿನೆನ್ಸ್ ದೆಸೆಯಿಂದ ಕಂಡದ್ದನ್ನು ಕಂಡಂತೆ ಹೇಳಲೂ ಸ್ವಾತಂತ್ರ್ಯವಿಲ್ಲ. ಇದೆಂತಹ ಕಾಲವೋ ನಾನರಿಯೆ! ಕಾಲವೇ ಹಾಳಾಗಿ ಹೋಗಿದೆ! ಯಾರನ್ನೇಕೆ ದೂರಲಿ? ನೀತಿಯು ಸ್ಥಳವನ್ನು ಅನೀತಿಯು ಆಕ್ರಮಿಸಿದೆ. ಕೊಟ್ಟ ಭಾಷೆಗೆ ತಪ್ಪುವ ಅಭ್ಯಾಸ ಆಳರಸರಿಂದ ಮೊದಲುಗೊಂಡು ಪ್ರಜೆಗಳ ವರೆಗೂ ಬಂದಿದೆ. ದುರಭ್ಯಾಸ ನಿವಾರಣೆಯಾಗಲೆಂದು ನೀತಿಯುತರು ಬೊಬ್ಬಿಡುವಾಗ ಅನೀತಿಯುರು ಅದಿರಲೆನ್ನುತ್ತಾರೆ. ಪರರ ರಾಷ್ಟ್ರವನ್ನು ತಮ್ಮ ಅಂಗಡಿಯೆಂದು ಭಾವಿಸಿ ಒಂದು ರೀತಿಯ ಸುಲಿಗೆಗೇ ಆರಂಭವಾಗಿದೆ. ಸ್ವಾತಂತ್ರ್ಯವೆಂತೂ ಮಣ್ಣುಪಾಲಾಗಿ ಹೋಗಿದೆ. ಜನಾಂಗವು ಕೆಟ್ಟುಹೋಗಿದೆ. ಯಾವ ಕಡೆಯಲ್ಲೂ "ಹಣ! ಹಣ!! ಹಣ!!!"ವೆಂಬ ರಣದುಂದುಭಿಯು ಕೇಳಿಬರುತ್ತಿದೆ. ಇಂತಹ ಕಾಲದಲ್ಲಿ ಬದುಕಿ ಬರುವುದೇ ಕಷ್ಟ! ಸಾಮುದಾಯಿಕ ಟೀಕೆಗಳನ್ನು ಮಾಡಿದರೆ ಅವು ವೈಯಕ್ತಿಕವೆಂದು ನೆನೆಯುತ್ತಾರೆ. ವೈಯಕ್ತಿಕವಿದ್ದರೆ ಅವು ಸಾಮುದಾಯಿಕವೆಂದೇ ಭಾವಿಸುತ್ತಾರೆ. ಬಡವರ ಶ್ರೇಯಸ್ಸಿನ ಕುರಿತು ಮಾತನಾಡಬೇಕು ಅನ್ನುತ್ತೀರಿ! ಎರವಾಡಾ ಜೈಲಿಗೆ ನೋಡಬಾರದೇ? ಬಡವರ ಬಂಧುವಾಗಿ ಕೆಲಸ ಮಾಡಿದ ಆ ಗಾಂಧಿಜೀಯವರ ಅವಸ್ಥೆಯೇನಾಗಿದೆ? ದೇಶಕ್ಕಾಗಿ ಹೋರಾಡಿದ ಸಾವಿರಾರು ಕೊಂಗ್ರೆಸ್‌ವಾಲರ ಗತಿಯೇನಾಗಿದೆ? ಬಡವರ ಸುದ್ದಿ ಎತ್ತಿದರೆ ಅದು ಕ್ರಾಂತಿಯೆಂದು ಭಾವಿಸಿಕೊಳ್ಳುತ್ತಾರೆ! ಅನ್ನಕ್ಕಾಗಿ ಬಾಯ್ತೆರೆದರೆ ಬೈದನೆಂಬಾರೋಪನೆಗೆ ಗುರಿಪಡಿಸುತ್ತಾರೆ. ಮತ್ತು ಬಡವರ ಹಿತಚಿಂತನೆಯನ್ನು ಮಾಡುವುದೆಂತು? ರೈತರ ಮೇಲೆ ಕರುಣೆಯಿಡಿರಿ ಎಂದು ಬೇಡಿಕೊಂಡರೆ 'ಹೇಳುವುದಕ್ಕೂ ಕೇಳುವುದಕ್ಕೂ ಇದು ಸಮಯವಲ್ಲ' ಎಂಬ ಓಬೀರಾಯನ ಕಾಲದ ಮಾತು ಬರುತ್ತದೆ. ಮದ್ಯಪಾನ ನಿಷೇಧಕ್ಕೆ ಬೆಂಬಲ ಕೊಡಿರಿ ಎಂದರೆ ಕಾಸಿಲ್ಲ ಎನ್ನುತ್ತಾರೆ. ಆದರೆ ನೌಕರರ ಸಂಬಳವನ್ನು ಹೆಚ್ಚಿಸುತ್ತಾರೆ. ಅಂದು ಕಡಿದ ಕಡಿತವನ್ನು ಕೂಡಿಸಿ ಕೊಡುತ್ತಾರೆ. "ನಮ್ಮ ಸೈನ್ಯ ನಮಗೆ ಕೊಡಿರಿ, ನಮ್ಮ ಖಜಾನೆ ನಮಗೆ ಬಿಡಿರಿ" ಎಂದು ಕೇಳಿದರೆ ಮೊನ್ನಿನ ವೈಟ್ ಪೇಪರಿನ ರಾಜ್ಯದಾನವನ್ನು ಮಾಡುತ್ತಾರೆ. ವೈಸರಾಯರಲ್ಲಿ ನಿರಂಕುಶ ಪ್ರಭುತ್ವದ ಅಧಿಕಾರವನ್ನು ಕೊಡಬೇಡಿರೆಂದು ಹೇಳಿದರೆ ವೈಸರಾಯರಿಗೆ ಒಂದು ಡಜನ್ ವೈಸರಾಯರ ದಮನ ಶಕ್ತಿಯನ್ನು ಕೊಡುತ್ತಾರೆ. ಜನರು ಕೂಡಾ ಹೀಗೆಯೆ—ಒಳ್ಳೆ ಕೆಲಸಗಳಿಗೆ ಕೈಕೊಡುವುದಿಲ್ಲ. ಬೇಡುವವರಿಗೆ ಒಂದು ಮುಕ್ಕಾಲು ಕೊಡದೆ ಅದೇ ಮುಕ್ಕಾಲನ್ನು ಬಳಿಯ ಅಂಗಡಿಯಲ್ಲಿ ಸಿಗರೇಟಿಗಾಗಿ ವ್ಯಯ ಮಾಡುತ್ತಾರೆ. ಅನ್ನವಿಲ್ಲದ ಕುಟುಂಬದವರು ಅನ್ನಕ್ಕೆ ಕಾಸು ಕೇಳಿದರೆ ಹಾಗೆ ಕೇಳಿದವರ ಕುತ್ತಿಗೆಗೆ ಅರ್ಧಚಂದ್ರ ಪ್ರಯೋಗವಾಗಿ ಅದೇ ಆಣೆಯನ್ನು ಪಿತ್ತವೇರಿಸುವ, ನಿದ್ದೆಗೆಡಿಸುವ ಚಾ ಕಾಫಿಗಳಿಗೆ ವೆಚ್ಚಮಾಡುತ್ತಾರೆ. ಸಂಪಾದಕರೇ, ಮತ್ತೇನೆನ್ನಲಿ? ಇಡೀ ಜಗತ್ತೇ ಸ್ವಾರ್ಥಮಯವಾಗಿದೆ. ಸ್ವೋನ್ನತಿ ಸಾಧನೆಗಳ ಬದಲು ಸ್ವಸುಖವನ್ನು ಹೇಗೂ ಮಾಡಿಯಾದರೂ ಅನುಭವಿಸುತ್ತಾರೆ. ಅಂತಹ ಕುಂದುಕೊರತೆಗಳನ್ನೆತ್ತಿ ತೋರಿಸಿದರೆ ಸಿಟ್ಟಿಗೇಳುತ್ತಾರೆ. ಹಿತವಾದಿಗಳೊಡನೆ ಹಗೆಕಟ್ಟಿಕೊಳ್ಳುತ್ತಾರೆ. ಹೇಗೂ ಇರಲಿ! ನನ್ನ ಸೇವೆಯು ಕಠಿಣವಾಗಿರಬಹುದು. ಅದು ಹೋಗಲಿ! ನಿಮ್ಮ ಎರಡನೆಯ ವರ್ಷದಲ್ಲಾದರೂ ಎಲ್ಲರೂ, ಅದರಲ್ಲೂ ನಿಮ್ಮ ಓದಿಗರು ಒಳ್ಳೆಯವರಾಗಿ ಬಾಳಲಿ! ಜೈಲಿನ ಮುದುಕನ ಬಿಡುಗಡೆಯಾಗಲಿ! ಸೋದರಸೋದರಿಯರು ಬಂಧನದಿಂದ ಹೊರಬರಲಿ! ನಿಮ್ಮ ಚಂದಾದಾರರು ಹೆಚ್ಚಲಿ! ನನ್ನ ಮಿತ್ರರು ವೃದ್ಧಿಯಾಗಿ ಬಾಳಲಿ! ಇಷ್ಟು ಹೇಳಿ ನಾನು ನಾಳೆ ಮೈಸೂರಿಗೆ ತೆರಳುತ್ತೇನೆ. ಪ್ರಿಯ ಪತ್ನಿಯ ಪ್ರಿಯ ಕಾಗದಗಳು ಪದೇ ಪದೇ ಬರುತ್ತಿವೆ. ಮೊನ್ನಿನ ಕಾಗದದಲ್ಲಿ ಒಬ್ಬ ಹೆಂಗಸು ಒಬ್ಬ ಗಂಡುಸಿಗೆ ಹಿಡಿಸೂಡಿಯಿಂದ ಹೊಡೆಯುತ್ತಿರುವ ಚಿತ್ರವನ್ನು ಬಿಡಿಸಿ ಕಳುಹಿಸಿದ್ದಾಳೆ. ಇದರರ್ಥ ನಿಮಗೆ ತಿಳಿಯದು! ನನಗೆ ತಿಳಿದಿದೆ. "ಬೇಗನೇ ಊರಿಗೆ ಬರದಿದ್ದರೆ ನಿಮ್ಮ ಗತಿಯೂ ಇದೇ!" ಎಂಬುದೇ ಅವಳ ಅರ್ಥವಿದೆ. ಆದುದರಿಂದ ಅಯ್ಯಾ ವಾಚಕರೇ, ಕ್ಷಮಿಸಿರಿ! ನಿಮ್ಮ ಮೈಸೂರು ನರ್ಸಣ್ಣನನ್ನು ಕ್ಷಮಿಸಿರಿ. ಎರಡು ತಿಂಗಳುಗಳ ರಜೆ ಪಡೆದು ಹೋಗಿ 'ಬಡವರ ಬಂಧು'ವಿನ ಎರಡನೇ ವರ್ಷದಲ್ಲಿ ಬೇಕಾದರೆ ಹಿಂತಿರುಗುವೆನು! ನಮ್ಮ ವಕೀಲರ ಬಾರ್ ರೂಮಿನಲ್ಲಿನ ತೋಟಗಾರ ವೆಂಕ್ಟನಿಗೆ ಆದ ನ್ಯಾಯ(?)ದ ವಿಮರ್ಶೆಗಾಗಿ ಬರುವ ವರ್ಷ ಬರುವೆನು. ಗೋಳಿಮರದ ಒಂದು ಗೆಲ್ಲನ್ನು ಕಡಿದು ಬಾರ್ ರೂಮಿನ ಬಳ್ಳಿ ಬಿಡಲು ಉಪಯೋಗಿಸಿದುದಕ್ಕೆ ಅವನ ಇಂಕ್ರಿಮೆಂಟನ್ನೇ ನಿಲ್ಲಿಸಿಬಿಟ್ಟರಂತೆ! ಅದೇಕೆಂದು ಕೇಳಬರುವೆನು. ಬಡವರನ್ನು ದಣಿಸುವವರನ್ನು ಕಂಡರೆ ಖಂಡಿಸಬರುವೆನು. ಅಥವಾ ನನ್ನ ಅಳಿಯ 'ಧೂಮಕೇತು'ವನ್ನಾದರೂ ಕಳುಹಿಸುವೆನು. ನನ್ನ ಅಳಿಯನ ಪ್ರತಾಪ ನಿಮಗೆ ಗೊತ್ತಿಲ್ಲ! ಬಹು ಜೋರಿನವ ಸ್ವಾಮಿ! ಅವನಿಗೆ, ಕರುಣೆಯಿಲ್ಲದ ಐಶ್ವರ್ಯವಂತರ ಮೇಲೆ ಹಗೆ! ಲೋಭಿಗಳಲ್ಲಿ ಬಹಳ ಕೋಪ. ಅವನು ನಿಮ್ಮೂರಿಗೆ ಬಂದರೆ ಬಹಳ ಕೆಲಸವಾಗಲಿದೆ ಸ್ವಾಮಿ! ಆಯಿತು ಹೋಗುವೆನು—ಪ್ರೀತಿ ತುಂಬಾ ಇರಲಿ, ಗುಡ್ ಬ್ಯಾ!

ನಕ್ಷತ್ರಗಳು ಹಗಲಲ್ಲಿ ಎಲ್ಲಿ ಇರುತ್ತವೆ?

ನಕ್ಷತ್ರಗಳು ಆಕಾಶದಲ್ಲಿ ಸದಾ ಇರುತ್ತವೆ! ಸೂರ್ಯನ ಪ್ರಕಾಶವು ನಕ್ಷತ್ರದ ಬೆಳಕಿಗಿಂತ ಹೆಚ್ಚಿನ ತೀಕ್ಷ್ಣವಾಗಿರುವುದರಿಂದ ನಕ್ಷತ್ರಗಳು ನಮಗೆ ಹಗಲಲ್ಲಿ ಕಾಣುವುದಿಲ್ಲ.

ಒಂದು ದಿನಕ್ಕೆ 85628855 ಗುಂಡು ಸೂಜಿಗಳಾಗುತ್ತವಲ್ಲ! ಅವುಗಳೇನಾಗುತ್ತವೆ?

ಇವುಗಳನ್ನು ಇಡೀ ಪ್ರಪಂಚವು ಉಪಯೋಗಿಸುತ್ತದೆ. ಹೆಚ್ಚಿನ ಗುಂಡು ಸೂಜಿಗಳು 'ಫೈಲು'ಗಳಿಗೆ ಹೋಗುತ್ತವೆ. ಕೆಲವು ಬಿಸಾಡಿ ಹೋಗುತ್ತವೆ.

ಹಾಸ್ಯವನ್ನು ಅವಸರದಿಂದ ಓದುವುದಲ್ಲ. ಅದರಲ್ಲಿನ ಶಬ್ದಾರ್ಥದಲ್ಲಡಗಿರುವ ಹಾಸ್ಯರಸವನ್ನು ಹೀರಬೇಕು.

ಬಡವರ ಬಂಧು ಹಾಸ್ಯೌಷಧಾಲಯ.

ಹಾಸ್ಯಸಂಗ್ರಹಕಾರರು ಬೇಕಾಗಿದ್ದಾರೆ. ಉತ್ತಮ ಹಾಸ್ಯಗಳಿಗೆ "ಸುಸ್ವಾಗತ"ವಿದೆ.

ಡಾಕ್ಟರರು—**ಕುತ್ತದ ಮುತ್ತಣ್ಣ,** W. I. L. D. C. A. T.

ಅತೀ ಅಗ್ಗ! **ಮನೋರೋಗಕ್ಕೆ ಕೆಳಗಿನವು ದಿವ್ಯೌಷಧ.** **ನಗುವವರಿಗೆ ಧರ್ಮ!**

ಕಲ್ಯಾಣಿ:—ನಿನ್ನೆ ರಾತ್ರಿ ನಿಮ್ಮ ಮನೆಗೆ ನುಗ್ಗಿದ ಕಳ್ಳರೊಡನೆ ನೀನು ಜಗಳವಾಡುತಿದ್ದಾಗ, ನಿನ್ನ ಗಂಡನೇನು ಮಾಡುತ್ತಿದ್ದ?

ಲಕ್ಷ್ಮಿ:—ಅವರು ಬಚ್ಚಲು ಕೊಟ್ಟಿಗೆಗೆ ಓಡಿ ಹೋಗಿ, ಕಳ್ಳನು ನನ್ನೊಡನೆ ಜಗಳವಾಡಿ ಸೋತು ಓಡಿ ಹೋಗಲೆಂದು ದೇವರೊಡನೆ ಪ್ರಾರ್ಥಿಸುತ್ತಿದ್ದರು.

\+ * + +

ಡಾಕ್ಟರ್:—ನೀನಿಂದು ನಿನ್ನೆಗಿಂತ ಹುಶಾರಾಗಿದ್ದಿ; ಅಲ್ಲದೆ ಮುಖದಲ್ಲಿ ಒಳ್ಳೇ ಆರೋಗ್ಯದ ಲಕ್ಷಣ ಬಂದಿದೆ.

ರೋಗಿ:—ನಿಮ್ಮ ಔಷಧಿ ಬಾಟ್ಲಿಯಲ್ಲಿ ಬರೆದಿದ್ದ ಸೂಚನೆಯಂತೆ ನಡಕೊಂಡದ್ದರಿಂದ ಇಂದು ಇಷ್ಟು ಹುಶಾರಾಗಿದ್ದೇನೆ.

ಡಾ:—ಅದರಲ್ಲೇನು ಸೂಚನೆಯಿತ್ತು?

ರೋ:—ಬಾಟ್ಲಿಯ ಬೂಚ(cork)ನ್ನು ಯಾವಾಗಲೂ ಬಂದು ಮಾಡಿಯೇ ಇಡಬೇಕು' ಎಂದಿತ್ತು.

* + + +

ಧನಿ:—ನೀನು ನನ್ನ ಮನೆಗೆ ಬಂದು ಒಕ್ಕಲಾಗಿ ಆರು ತಿಂಗಳುಗಳಾದುವು. ಇಷ್ಟರವರೆಗೂ ಒಂದು ತಿಂಗಳ ಬಾಡಿಗೆಯಾದರೂ ಕೊಡಲಿಲ್ಲ.

ಒಕ್ಕಲು:—ಇದೇನ್ರಿ? ನಾನು ಪ್ರಥಮತಾ ಈ ಮನೆಗೆ ಬಂದಾಗ ಮುಂದಕ್ಕೆ ಇದನ್ನು ನಿಮ್ಮ ಸ್ವಂತ ಮನೆಯೆಂದೇ ಭಾವಿಸಿರೆಂದು ಹೇಳಿದ್ದಿರಿ. ಸ್ವಂತ ಮನೆ ಎಂದ ಮೇಲೆ ಬಾಡಿಗೆ ಕೊಡುವುದಾದರೂ ಯಾರಿಗೆ?

\+ + + +

ಮುನ್ಸಿಪಲ್ ವಾರಾಂಟಾಫೀಸರು:—ಏನ್ರಿ ನಿಮ್ಮ ಸೈಕ್ಲಿಗೆ ಬಿಲ್ಲೆ (License) ಇಲ್ರಿ? ನಡೀರಿ ವನ್ಸ್ನೊತೇಲಿ.

ಕೊನ್ಸ್‌ಟೇಬಲ್:—ಏನ್ರಿ ನಿಮ್ಮ ಸೈಕಲ್ಗೆ ಬ್ರೇಕ್ ಮತ್ತು ಬೆಲ್ಲ್ ಇಲ್ಲ. ಹೂಂ. ಬನ್ನಿ ನನ್ನಂಗ್ಡ.

\+ + + +

ಸುಂದರಿ ತರುಣಿಯೋರ್ವಳು:—ಅಯ್ಯ ನೀವು ಕುಳಿತಲ್ಲಿ ಇನ್ನೊಬ್ಬಳಿಗೆ ಸ್ಥಳ ಸಿಗಬಹುದೋ?

ರೈಲುಗಾಡಿಯೊಳಗೆ ಕುಳಿತ ಯುವಕ:—ಓಹೋ ಧಾರಾಳವಾಗಿ ಸ್ಥಳವುಂಟು. ಬನ್ನಿ.

ತರುಣಿಯು ತನ್ನ ೭೦ ವರ್ಷ ಪ್ರಾಯದ ಅಜ್ಜಿಯನ್ನು ಯುವಕನ ಪಕ್ಕದಲ್ಲಿ ಕುಳ್ಳಿರಿಸಿ—"ಈಕೆಯನ್ನು ಚಿಕ್ಕ ಪೇಟೆಯಲ್ಲಿ ಇಳಿಸುವ ಏರ್ಪಾಡು ಮಾಡಿರಿ ಸ್ವಾಮಿ. ತಮ್ಮ ಉಪಕಾರ" ಎಂದಳು. (ಯುವಕನಿಗೆ ಸಿಡಿಲು ಬಡೆದಂತಾಯಿತು).

ಶ್ರೀ ಎಸ್. ಎಸ್. ಬೋಳೂರ್.

\+ + + +

ತಂದೆ:—ಕೃಷ್ಣಾ ನೀನು ಇಂದಿನಿಂದ ಬೀಡಿ ಸೇದಕೂಡದು. ತಿಳಿಯಿತೇ?

ಕೃಷ್ಣ:—ಇಲ್ಲ-ಅಪ್ಪಾ- ಖಂಡಿತವಾಗಿ ನಾನಿನ್ನು ಬೀಡಿ ಸೇದುವುದಿಲ್ಲ. ನೀವು ಸೇದುವಂತೆ ಸ್ವಲ್ಪ ಸ್ವಲ್ಪ ಗಂಜಾವನ್ನೇ ಸೇದುವೆನು. ಅದೊಳ್ಳೆಯದಲ್ಲವೇ?

ಶ್ರೀ ಯಂ. ವಾಸುದೇವನ್ನಾಕ್.

\+ + + +

ಮಾಸ್ಟ್ರು:—ಹಸಿದಿರುವಾಗ ಏನಾಗುತ್ತೊ?

ಶಿಷ್ಯ:—ಹೊಟ್ಟೆ ಕಿರಿಯುತ್ತೆ ಸಾರ್.

ಮಾಸ್ಟ್ರು:—ತಿಂದ ಮೇಲೆ.

ಶಿಷ್ಯ:—ಕಂಡೇ ಇದೆ ಸಾರ್ ಮಲಗೋಯೋಚ್ನೆ.

ಮಾ:—ಕತ್ತೆ ಓದುವುದ್ಯಾವಾಗಲೋ?

ಶಿ:—ಅದಿಲ್ಲದಿದ್ರು ಚಿಂತಿಲ್ಲ ಸಾರ್. ಪರೀಕ್ಷೆಯ ಉತ್ತರದ ಪತ್ರಿಕೆಗಳನ್ನು ನೀವು ಕೊಂಚ ನೋಡಿಕೊಳ್ಳಿ. ನಿಮ್ಮ ಕೈ ಬೆಚ್ಚಗಾಗುವುದನ್ನು ನಾನು ನೋಡಿಕೊಳ್ಳುತ್ತೇನೆ.

ಶ್ರೀ ಬಿ. ಯಸ್. ಕೃಷ್ಣಮೂರ್ತಿ.

\+ + + +

ಮೆಜಿಸ್ಟ್ರೇಟ್:—(ಆತ್ಮಹತ್ಯೆ ಮಾಡಿಕೊಳ್ಳುವರೆ ಪ್ರಯತ್ನಿಸಿ ಅಪಾದಿತನಾದ ಕೂಡೆ):—ಏನೋ ಇದೇ ಆರೋಪದಿಂದ ಈ ಮೊದಲು ನಾನು, ನಿನ್ನನ್ನು ಎರಡಾವರ್ತಿ ದಂಡಿಸಿದುದಾಯಿತು. ಈಗ ಪುನಃ ಅಪಾದಿತನಾಗಿ ಬಂದು ನಿಲ್ಲುವರೆ ನಿನಗೆ ನಾಚಿಕೆಯಾಗುವುದಿಲ್ಲವೇ?

ಅಪಾದಿತ:—ಏನು ಮಾಡೋಣ ಸ್ವಾಮಿ? ತಮಗೆ ನನ್ನೀ ಸುಟ್ಟ ಮುಖವನ್ನು ಇನ್ನೊಮ್ಮೆ ತೋರಿಸಬಾರದೆಂದೇ ನಾನು ಮೂರನೇ ಸಲ ಆತ್ಮಹತ್ಯೆ ಗೈಯ್ಯುವರೆ ಪ್ರಯತ್ನಿಸಿದುದು. ಆದರೆ ದೈವ ತಾ ಬೇರೊಂದು ನೆನೆಯಿತು.

ಶ್ರೀ ಯಂ. ನಾರಾಯಣ. ಬೊಂಬಾಯಿ

\+ + + +

ರಾಜ:—ಅಪ್ಪಾ! ನನ್ನನ್ನಿಂದು ನಾಟಕಕ್ಕೆ ಕರಕೊಂಡು ಹೋದರೆ ನೀವು ಹೇಳಿದಂತೆ ನಾನು ಕೇಳುತ್ತೇನೆ.

ತಂದೆ:—ರಾಜಾ ನೀನು ನಾನು ಹೇಳಿದ ಹಾಗೆ ಕೇಳುವಿ ಎಂಬುದು ಖಂಡಿತವೋ?

ರಾಜ:—ನಿಜವಾಗಿಯೂ ನೀವು ಹೇಳಿದಂತೇ ಕೇಳುತ್ತೇನೆ.

ತಂದೆ:—ಹಾಗಾದರೆ ನೀನಿಂದು ನಾಟಕಕ್ಕೆ ಹೋಗಬಾರದು.

\+ + + +

ಸುಬ್ಬಕ್ಕ:—"ಆಚೆ ಮನೆಯ ಸೀತಕ್ಕನ ಮಗಳು ಹಾರ್ಮೋನಿಯಂ ಬಾರಿಸುತ್ತ ಬಾರಿಸುತ್ತ ಎರಡು ಬೆರಳುಗಳಿಗೆ ಪಕ್ಷವಾತ ಹಿಡಿದಿದೆಯಂತೆ!"

ಗಂಗಮ್ಮ:—ಅದೇನು ದೊಡ್ಡ ಮಾತು! ನನ್ನ ಮಗಳು ಹಾರ್ಮೋನಿಯಂ ಬಾರಿಸುತ್ತ ಬಾರಿಸುತ್ತ ಎರಡು ಹಾರ್ಮೋನಿಯಂ ಪೆಟ್ಟಿಗೆಗಳಿಗೇ ಪಕ್ಷವಾತ ಹಿಡಿದುದಾಯಿತು!"

\+ + + +

ತಂದೆ—"ಮಗೂ, ಯಾವ ಕೆಲಸವನ್ನಾದರೂ ಬುಡದಿಂದ ಪ್ರಾರಂಭಿಸಿ ಮಾಡದಿದ್ದರೆ ಚೆನ್ನಾಗುವುದಿಲ್ಲ"

ಮಗ—"ಈಜು ಕಲಿಸುವುದು ಅಪ್ಪಾ?"

ಮದ್ರಾಸು ಗವರ್ನರರ ಮೇಲೆ ಪಿತೂರಿ?

ಮದ್ರಾಸಿನ ಕೌನ್ಸಿಲಿನಲ್ಲಿ ಗವರ್ನರರ ಸಿಂಹಾಸನದ ಹಿಂದುಗಡೆ ಪರದೆಯೊಳಗೆ ಒಂದು ರಿವಾಲ್ವರು ಕಾಣಸಿಕ್ಕಿದೆ. ಮೂರು ಗುಂಡುಗಳಿದ್ದುವು! ಮದ್ರಾಸಿಗೂ ಬಂತೇ?

ಕೊಲೆಂಬೊ ಸಮುದ್ರದಲ್ಲಿ 'ಹಿನ್ನೊ' ಎಂಬ ಮೋಟರ್ ಸ್ಟೀಮರು ಬೆಂಕಿ ಗಾಹುತಿಯಾಗಿ ೧೫ ಮಂದಿಗಳು ಮೃತರಾದರು!

ಚಿಕಾಗೋ ಮೇಯರರನ್ನು ಗುಂಡಿಕ್ಕಿ ಕೊಂದ ಜಂಗಾರನೆಂಬ ಇಟೆಲಿಯಾನನನ್ನು ವಿದ್ಯುತ್ ಯಂತ್ರಕ್ಕೆ ಕೊಟ್ಟು ದಂಡಿಸಿ ಕೊಂದರು.

ರಂಗೂನಿನ ಟವ್ರ್ಯೊ ಎಂಬಲ್ಲಿ ವಾಸಿಸಿಕೊಂಡು ಗನಿಯ ಕೆಲಸದಲ್ಲಿದ್ದ ಎಲ್ಸಂ ಎಂಬ ಯುರೋಪಿಯನ್ ಅಧಿಕಾರಿಯೊಬ್ಬರು ಸಂಜೆ ತಿರುಗಾಡ ಹೋಗಿ ೬ ದಿನಗಳ ತನಕವೂ ಮನೆಗೆ ಬರಲಿಲ್ಲ! ತಿರುಗಾಡಿ ಮುಗಿಯಲಿಲ್ಲವೋ?

ಭಗತ್‌ಸಿಂಗನ ಮರಣ ದಿನಾಚರಣೆಗಾಗಿ ನ್ಯೂಡಿಲ್ಲಿಯಲ್ಲಿ ಅನೇಕರ ಮನೆ ಜಡ್ತಿ! ಆಚರಣೆ ಮಾತ್ರ ಆಗಿದೆಯಂತೆ! ಅಖಿಳಭಾರತ ಕೊಂಗ್ರೆಸ್ ಸ್ವಾಗತ ಕಮಿಟಿಯನ್ನು ಸರಕಾರವು ನಿಷೇಧಿಸಿ ಅದರ ಸೆಕ್ರಿಟೆರಿಯಾದ ಡಾ। ಪ್ರಫುಲ್ಲಘೋಷ್ ಎಂಬವರನ್ನು ಶಿಕ್ಷಿಸಿಯೂ ಆಯಿತು!

ಆದಿತ್ಯವಾರ ದಿನ ಮುಂಬಾಯಿಯಲ್ಲಿ ೧೨ ಮಂದಿ ಆಂಗ್ಲೇಯರು ಸಮುದ್ರ ಸಂಚಾರಕ್ಕೆ ಹೊರಟು ಮಹಾ ಬಿರುಗಾಳಿಗೆ ಸಿಲುಕಿ ೧೬ ತಾಸು ಸಮುದ್ರದಲ್ಲೇ ಬಳಲಿ ಕೊನೆಗೆ ಬದುಕಿ ಬಂದರು! ಬದುಕಿದುದು ವಿಶೇಷವಂತೆ!

ಮುಂಬಾಯಿಯ ೪೦೦೦ ಗಿರಣಿ ಕೆಲಸಗಾರರು ಹೆಚ್ಚು ಸಂಬಳ ದೊರೆಯುವುದಕ್ಕಾಗಿ ಮುಷ್ಕರ ಹಿಡಿದಿರುವರು.

ಮುಂಬಾಯಿಯ ಮೊಗವೀರ ಸ್ಪೋರ್ಟ್ಸ್ ಕ್ಲಬ್ಬಿನ ಸಹಾಯಾರ್ಥವಾಗಿ ಕರ್ನಾಟಕ ನೂತನ ಸಭೆಯವರು ತಾ. ೧೪ನೇ ಶುಕ್ರವಾರ ಶ್ರೀರಾಮ ಪಾದುಕಾ ಪಟ್ಟಾಭಿಷೇಕ ನಾಟಕವನ್ನು ಆಡುವರು.

ಇಲ್ಲಿಯ ತಹಶೀಲ್ದಾರರಾದ ರಾ। ಎನ್. ಕೃಷ್ಣಪ್ಪನವರು ರಜೆ ಹೊಂದಿ ಕೆಲಸದಿಂದ ನಿವೃತ್ತಿಪಡೆಯಲಿದ್ದಾರೆ.

ಚಿಟ್ಟಗೊಂಗಿನಲ್ಲಿ ತಲೆತಪ್ಪಿಸಿಕೊಂಡು ಓಡುತ್ತಿರುವ ಕ್ರಾಂತಿಕಾರರೆಂದು ಭಾವಿಸಿ ಮಿಲಿಟೆರಿಯವರು ಇಬ್ಬರು ಮುಸಲ್ಮಾನರಿಗೆ ರಾತ್ರಿ ಗುಂಡು ಹೊಡೆದು ಕೊಂದರು. ಈ ಭಾವನೆಗೆ ಯಾವ ಶಿಕ್ಷೆ?

ಫ್ರೆಂಚ್ ಚಂದ್ರನಗರದಲ್ಲಿ ಕ್ವಿನ್ ಎಂಬ ಪೋಲೀಸ್ ಕಮಿಶನರರನ್ನು ಕ್ರಾಂತಿಕಾರ ಯುವಕರು ಗುಂಡಿಕ್ಕಿ ಕೊಂದರು.

ಇಬ್ಬರು ಸ್ತ್ರೀಯರನ್ನು ವಧಿಸಿದುದಕ್ಕಾಗಿ ಸುಬೇದಾರ ಜೈದ್‌ಗಲ್ ಎಂಬ ಮಾಜಿ ಮಿಲಿಟೆರಿ ಪೆನ್ಶನಿಯರರಿಗೆ ಫಾಶಿ ಶಿಕ್ಷೆಯಾಯಿತು.

ಜಬ್ಬಲ್‌ಪುರದಲ್ಲಿ ಮಿಸೆಸ್ ರೇಗೋ ಮತ್ತು ಸ್ಕ್ಯಾಟನ್ ಎಂಬ ಮಿಲಿಟೆರಿಯವನು ರೇಗೋಳ ಗಂಡನನ್ನು ಕೊಂದ ಕುರಿತಾದ ಫಾಶಿ ಶಿಕ್ಷೆಯು ಅಪ್ಪೀಲಿನಿಂದ ಬಿದ್ದು ಹೋಯಿತು.

ಮುಂಬಾಯಿಯಲ್ಲಿ ಕೊಂಗ್ರೆಸ್ ಕೆಲಸಗಾರರಾದ ಬೆರಿಸ್ಟರ್ ಎ. ಕೆ. ಅಮೀನರನ್ನು ಹಿಡಿದು ಶಿಕ್ಷಿಸಿದರು.

ವಿಜಗಪಟ್ಟಾಮಿನಲ್ಲಿ ವೆಂಕಟರಾಮಯ್ಯ ಎಂಬ ಸರಾಫನು ಕಳ್ಳ ನಾಣ್ಯಗಳನ್ನು ತಯಾರಿಸಿದನೆಂಬ ಆರೋಪದಿಂದ ಸೆರೆಗೊಳಗಾಗಿರುವನು! ಹಣ ಫಳಿಸಿದರೂ ಶಿಕ್ಷೆ!

ದಿವಾನ್ ಬಹದ್ದೂರ್ ಗೋವಿಂದಾಸ್ ಚತುರ್ಭುಜದಾಸ್ ಎಂಬವರು ಅಸ್ಪೃಶ್ಯರನ್ನು ದೂರನಿಡಬೇಕೆಂದು ಹೇಳಿ ವೈಸರಾಯರಿಗೆ ಮೊನ್ನೆ ನಾಲ್ಕು ಭುಜಬಲದಿಂದಲೂ ಮೊರೆಯಿಟ್ಟರು!

10 ರೂಪಾಯಿ ಇನಾಮು!

ಬಡವರ ಬಂಧುವಿನ ಪ್ರಥಮ ವರ್ಷೋತ್ಸವಕ್ಕಾಗಿ

ವಿಶೇಷ ಸ್ಪರ್ಧೆ!

ಈ ಕೆಳಗಿನ ಕೂಪನಿನಲ್ಲಿ ತೋರುವ ಒಂದು ನಂಬರನ್ನಾಗಲೀ ಎರಡು ನಂಬರುಗಳನ್ನಾಗಲೀ, ಅಥವಾ ಮೂರು ನಂಬರುಗಳನ್ನಾಗಲೀ ಪಡೆಯಬಹುದು. ಒಂದು ನಂಬರಿಗೆ ಒಂದಾಣೆಯಂತೆ ಅಂಚೆ ಚೀಟನ್ನು ಕೂಪನಿನ ಸಮೇತ ರವಾನಿಸಬೇಕು. ಕೂಪನಿನಲ್ಲಿ ನಿಮ್ಮ ಸರಿಯಾದ ಹೆಸರು ವಿಳಾಸಗಳನ್ನು ತುಂಬಿಸಬೇಕು. ಪಡೆಯುವ ನಂಬರುಗಳ ಸುತ್ತಲೂ ಒಂದೊಂದು ಉಂಗುರವನ್ನು ಹಾಕಬೇಕು. ಉಳಿದ ನಂಬರುಗಳನ್ನು ಹಾಗೆಯೇ ಬಿಟ್ಟುಬಿಡಬೇಕು. ಹೀಗೆ ಪಡೆದ ನಂಬರುಗಳನ್ನು ಮಡಚಿ ಸೋಡ್ತಿ ಪೆಟ್ಟಿಗೆಯಲ್ಲಿ ಹಾಕಿ ಸೋಡ್ತಿ ಎತ್ತಿ ೧೦ ರೂಪಾಯಿಗಳ ಒಂದು ಬಹುಮಾನವನ್ನು ಕೊಡಲಾಗುವುದು. ಬಹುಮಾನವು ಪ್ರವೇಶಕರ ಸಂಖ್ಯೆಯ ಮೇಲೆ ಹೊಂದಿಕೊಂಡಿದೆ. ಈ ಸ್ಪರ್ಧೆಗೆ ಸೇರಿದವರ ಹೆಸರುಗಳೂ ಬಹುಮಾನ ದೊರೆತವರ ಹೆಸರೂ ಜೂನ್ ತಿಂಗಳಲ್ಲಿ ಹೊರಡುವ ವಿಶೇಷ ಸಂಚಿಕೆಯಲ್ಲಿ ಪ್ರಕಟವಾಗುವುದು. ವಿಶೇಷ ಸಂಚಿಕೆಯ ಬೆಲೆ ನಾಲ್ಕಾಣೆ.

"ಬಡವರ ಬಂಧು" ಮೆನೇಜರರಿಗೆ– ಮಂಗಳೂರು.

ಪ್ರಿಯರೇ,

ಈ ಕೆಳಗಿನ ನಂಬರುಗಳನ್ನು ಪಡೆದು .... ಆಣೆಯ ಅಂಚೆ ಚೀಟನ್ನು ರವಾನಿಸಿರುವೆನು.

3128	3129	3130

ನನ್ನ ಸಂಪೂರ್ಣ ಹೆಸರು ಮತ್ತು ವಿಳಾಸ ....

....

ಕಳೆದ ತಾ. ೧೧ನೇ ದಿನ ಹೆಜಮಾಡಿಯಲ್ಲಿ ಶ್ರೀ ದಾಸಪ್ಪ ಚಂಪರವರು ರಾ। ಗುರುವ ಪುತ್ರನ್‌ರವರ ಪುತ್ರಿ ಶ್ರೀಮತಿ ಶ್ರೀದೇವಿ ಬಾಯಿಯೆಂಬ ಕನ್ನಿಕೆಯನ್ನು ವಿವಾಹವಾದರು.

ಅಮೇರಿಕದ ಲೋಸ್ ಎಂಜೆಲೆಸ್ ಎಂಬಲ್ಲಿ ಭಯಂಕರವಾದ ಭೂಕಂಪವುಂಟಾಗಿ ೬೨೦೦ ಕಟ್ಟಡಗಳು ನೆಲಕ್ಕೆ ಕುಸಿದುಬಿದ್ದಿವೆ. ೬೩ ಜನರು ಸತ್ತಿದ್ದಾರೆ. ೨೫೦೦ ಜನರಿಗೆ ಗಾಯವಾಗಿದೆ.

ವಿಮಾನ ಸೈನ್ಯವನ್ನು ಸರಿಯಾದ ವ್ಯವಸ್ಥೆಯಲ್ಲಿಡುವುದಕ್ಕೂ ವಿಸ್ತರಿಸುವುದಕ್ಕೂ ಬ್ರಿಟಿಷ ಸರಕಾರದವರು ಈ ವರ್ಷ ೧೭॥ ಮಿಲಿಯ ಪವನುಗಳನ್ನು ವೆಚ್ಚಮಾಡುವರೆಂದು ತಿಳಿಯುತ್ತದೆ.

ಜರ್ಮನಿಯಲ್ಲಿ ಅನೇಕ ಕಮ್ಯುನಿಸ್ಟ್ ಪಂಗಡದವರನ್ನು ಕೈದುಮಾಡುವಾಗ ಹಿಂದೀಯರಾಗಿರುವ ಶ್ರೀ ನಂಬಿಯಾರ್, ಶ್ರೀ. ನಾಯುಡು, ಇವರಿಬ್ಬರನ್ನೂ ಕೈದು ಮಾಡಿದ್ದರು. ಈಗ ಇವರನ್ನು ಬಿಡುಗಡೆಮಾಡಿದ್ದಾರಾಗಿ ತಿಳಿಯುತ್ತದೆ.

ಜಿನಿವದಲ್ಲಿ ಶಸ್ತ್ರಸನ್ಯಾಸ ಪರಿಷತ್ತು ಜರಗುತ್ತಿದೆ. ಅದಕ್ಕೆ ಮೆಕ್‌ಡೊನಾಲ್ಡ್ ಸಾಹೇಬರು ಹೊರಟಿದ್ದಾರೆ. "ನಾವು ನಿರೀಕ್ಷಿಸಿದಷ್ಟು ಪ್ರಯೋಜನಗಳು ಆಗದಿದ್ದರೂ ಏನಾದರೂ ಪ್ರಯೋಜನವುಂಟಾಗದೆ ಇರದು" ಎಂಬುದಾಗಿ ಮೆಕ್‌ಡೊನಾಲ್ಡರು ಹೇಳುತ್ತಾರೆ.